# HAVYAKA SANDESHA

# ಹವ್ಯಕ ಸಂದೇಶ

॥धर्मो रक्षति रक्षितः॥

A Monthly Newsletter of Havyaka Welfare Trust, Estd. 1964

Vol. XXXI No. 6 | APRIL 2022 | Pages 16 | Rs. 2/-





*PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.*

**Havyaka Sandesha** is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆ 2665 2591

***Hon. Editor*** : Smt. Amita S. Bhagwat

***Editorial Committee*** Smt. Shashikala Hegde
Smt. Tanuja Hegde
Shri Umesh Hegde
Smt. Shailaja Hegde

***Publisher*** : Narayan Akadas R.
Hon. Gen. Secretary

***Printed at*** : M/s. Navin Printers
Mumbai - 400 016.
✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2019-2020**

| | | |
|---|---|---|
| *President* | : | Shivkumar P. Bhagwat |
| *Vice - President* | : | Sanjay Bhat |
| *Hon. Gen. Secretary* | : | Narayan Akadas |
| *Hon. Jt. Secretary* | : | Umesh Hegde |
| *Hon. Treasurer* | : | A. G. Bhat |

***Elected Members :***

| | |
|---|---|
| Smt. Tanuja Hegde | A. K. Bhat |
| Smt. Shashikala Hegde | R. N. Kameshwar |
| Dr. Vivek Hebbar | Ramesh Vaidya |
| N. K. Hegde | Chidanand Bhagwat |
| Gautam Upadhya | |

***Co-opted Members :***
Umesh Maskeri, Shailaja Hegde

***ಸಂಪಾದಕೀಯ***

# ಶಾಂತಿಯ ಬಿಳಿಪಾರಿವಾಳ



ಯಾರೋ ಮಾಡಿಟ್ಟ ರಸ್ತೆಯಲ್ಲಿ ನಡೆದು ಹೋಗುವ ಹಂಗಿಲ್ಲ. ತಮ್ಮ ರಸ್ತೆಯನ್ನು ತಾವೇ ಸಿದ್ಧಗೊಳಿಸಿಕೊಳ್ಳಬೇಕಾದ ಅಗತ್ಯವಿಲ್ಲ. ತಮ್ಮ ರೆಕ್ಕೆಗಳನ್ನು ಫಡಪಡಿಸಿ ಹರಡಿಕೊಂಡರೆ ತಾವು ಬಯಸಿದಲ್ಲಿ ಅವುಗಳ ಪಯಣ. ಹೀಗಾಗಿಯೇ ಪಕ್ಷಿಗಳನ್ನು ಸ್ವಾತಂತ್ರ್ಯದ ದ್ಯೋತಕವಾಗಿ ಬಿಂಬಿಸಲಾಗುತ್ತಿವೆ. ಪಕ್ಷಿಗಳನ್ನು ಸಾಕುವುದೆಂದರೆ ಅವುಗಳಿಗಿಷ್ಟವಾಗದ ಬಂಧನದಲ್ಲಿ ಅವುಗಳನ್ನು ಸಿಲುಕಿಸುವುದು. ಹೀಗಾಗಿಯೇ ಅದು ಅನಪೇಕ್ಷಣೀಯ. ಅಷ್ಟೇ ಅಲ್ಲ, ಅಪರಾಧವೂ ಹೌದು.

ಸ್ವಾತಂತ್ರ್ಯ ಪ್ರೇಮಿಗಳಾದರೂ ಬಹುಪಾಲು ಹಕ್ಕಿಗಳು ತಮ್ಮ ಸಂತಾನಾಭಿವೃದ್ಧಿಗಾಗಿ ಗೂಡನ್ನು ಕಟ್ಟುತ್ತವೆ. ಮೊಟ್ಟೆಗೆ ಕಾವನ್ನು ಕೊಡುತ್ತವೆ. ಮರಿಗಳಿಗೆ ಚುಂಚಿನಿಂದ ಆಹಾರವನ್ನು ತಿನ್ನಿಸುತ್ತವೆ. ಪ್ರೀತಿಯ ಎಳೆಗಳಿಂದ ಬೆಚ್ಚಗಿಡುವ ಬಂಧನ ಅವುಗಳಿಗೂ ಬೇಕು.

ಗರಿಗಳಿಲ್ಲದಿದ್ದರೂ ಹಾರಬಲ್ಲ; ನಾಲ್ಕು ಕಾಲುಗಳಿಲ್ಲದಿದ್ದರೂ ದೂರವನ್ನು ಅತಿ ಶೀಘ್ರದಲ್ಲಿಯೇ ಕ್ರಮಿಸಬಲ್ಲ; ಗಗನಚುಂಬಿ ಕಟ್ಟಡಗಳನ್ನು ಕಟ್ಟಬಲ್ಲ ಮನುಷ್ಯನ ಬುದ್ಧಿಮತ್ತೆಯು ಅವನಿಗೆ ಪ್ರಕೃತಿಯು ನೀಡಿದ ಸ್ವಾತಂತ್ರ್ಯವೇ? ಅವನೂ ಕೂಡ ಪಶು ಪಕ್ಷಿಗಳಿರುವ ಪ್ರಾಕೃತಿಕ ವಾಂಛೆಯ ಹೊರತಾಗಿಲ್ಲ. ಹೀಗಾಗಿ ಸಂಸಾರದ ಬಂಧನದೊಳಗೆ ಸಿಲುಕಿಕೊಂಡು, ತನ್ನ ಮಕ್ಕಳಿಗೆ ಅಕ್ಕರೆಯ ನೀರೆರೆಯುತ್ತಾನೆ. ಅವರ ಭವಿತವ್ಯದ ಬಗ್ಗೆ ಕನಸು ಕಾಣುತ್ತ, ಅವರಿಗೆ ಉತ್ತಮವಾದ ವಿದ್ಯಾಭ್ಯಾಸವನ್ನು ನೀಡುತ್ತಾನೆ.

ಕಲಿಕೆಯ ನಂತರ ಒಳ್ಳೆಯ ನೌಕರಿ, ಉದ್ಯಮ ಅಥವಾ ವೃತ್ತಿಯ ಬಯಕೆ. ಬಹಳಷ್ಟು ವೇಳೆ ಯಾವ ಕಂಪೆನಿಯಲ್ಲಿ ಎಷ್ಟು ಪ್ಯಾಕೇಜ್ ಸಿಗುತ್ತದೆ ಎನ್ನುವ ಲೆಕ್ಕಾಚಾರ. ಒಟ್ಟಿನಲ್ಲಿ ಕೈ ತುಂಬ ಹಣ ಓಡಾಡುತ್ತಿರಬೇಕು. ಹಣ ಏತಕ್ಕೆ ಅಷ್ಟು ಮಹತ್ವದ್ದೆನಿಸುತ್ತದೆ? ಅದು ನಮ್ಮ ಅಗತ್ಯಗಳನ್ನು, ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಬೇಕು ಎನ್ನುವ ಮಾತ್ರಕ್ಕಷ್ಟೇ ಅಲ್ಲ. ಹಣವು ನೀಡುವ ಸ್ವಾತಂತ್ರ್ಯ ಪ್ರತಿಯೊಬ್ಬನಿಗೂ ಪ್ರಿಯ. ತನಗೆ ಬೇಕಾದ್ದನ್ನು ಕೊಂಡುಕೊಳ್ಳುವ, ದೇಶ ವಿದೇಶಗಳಲ್ಲಿ ಓಡಾಡುವ ಸಾಮರ್ಥ್ಯವನ್ನು ತಂದು ಕೊಡುವ ಕಾಂಚಾಣ, ತನಗೆ ರೆಕ್ಕೆಗಳಿವೆ ಎನ್ನುವ ಭ್ರಮೆಯನ್ನು ಹುಟ್ಟಿಸುತ್ತದೆ. ಆದರೆ ತಾನು ಮೇಲೇರಿದ್ದೇನೆ ಅಂದುಕೊಂಡಷ್ಟೂ ಅವನು ವಾಸ್ತವಿಕತೆಯಿಂದ ದೂರ ಸರಿಯುತ್ತಾನೆ.

ಸಮಸ್ತ ಮಾನವ ಕುಲದ ಮೇಲೆ ಸಮರ ಸಾರಿದ ಚಿಕ್ಕ ವೈರಾಣು ಮನುಜನನ್ನು ಧರೆಗಿಳಿಸಿತು. ವಸ್ತು ಸ್ಥಿತಿಯೊಂದಿಗೆ ಅವನ ಮುಖಾಮುಖಿಯಾಯಿತು. ಆ ಸಮಯದಲ್ಲಿ ಅವನು ಗಳಿಸಿದ ಸಂಪತ್ತು ಪ್ರಯೋಜನಕ್ಕೆ ಬರುತ್ತಿರಲಿಲ್ಲ. ನಿರುಪಾಯವಾಗಿದ್ದ ವಿಜ್ಞಾನ, ಪರಿಸ್ಥಿತಿಯನ್ನು ನಿಭಾಯಿಸಲು ಸಮಯವನ್ನು ತೆಗೆದುಕೊಂಡಿತು. ಇಡೀ ಜಗತ್ತೇ ಒಂದುಗೂಡಿ, ಪರಸ್ಪರ ಸಹಕಾರದೊಂದಿಗೆ ಸಮಸ್ಯೆಯನ್ನು ಎದುರಿಸುವಾಗ ಕುವೆಂಪುರವರ 'ವಿಶ್ವಮಾನವ'ಪರಿಕಲ್ಪನೆಗೆ ಜೀವ ಬಂದಂತಾಗಿತ್ತು.

ಈಗ ವಿಪತ್ತಿನಿಂದ ಪಾರಾದೆವು ಅಂದುಕೊಳ್ಳುವಷ್ಟರಲ್ಲಿ ರಷ್ಯಾ ಮತ್ತು ಯುಕ್ರೇನ್ ನಡುವಿನ ಸಮರ ನಮ್ಮನ್ನು ತಲ್ಲಣಗೊಳಿಸುತ್ತಿದೆ.

ದೇಶಗಳ ನಡುವಿನ ಯುದ್ಧವು ನಿಜವೆಂದರೆ ಮನುಷ್ಯರ ಮನಸ್ಸಿನ ನಡುವಿನ ಸಂಘರ್ಷವನ್ನು ತೋರಿಸುತ್ತದೆ. ಅಲ್ಲಿ ನಡೆಯುವುದು ಅಹಂಗಳ ತಿಕ್ಕಾಟ. ಅಲ್ಲಿ ಕಾಣುವುದು ಮನುಷ್ಯನ ದುರಾಸೆ ಹಾಗೂ ದುರಹಂಕಾರದ ಪ್ರತಿಫಲನ. ಯುದ್ಧದಲ್ಲಿ ಯಾವ ಪಕ್ಷವೇ ಗೆದ್ದರೂ, ಸಾವು ನೋವುಗಳು ಎರಡೂ ಪಕ್ಷಕ್ಕೂ ತಪ್ಪಿದ್ದಲ್ಲ.

ಜೀವನದಲ್ಲಿ ಎಲ್ಲದಕ್ಕಿಂತ ಮಿಗಿಲಾಗಿದ್ದು ನೆಮ್ಮದಿ. ಮಮತೆಯ ಬಂಧನ. ಪುಟ್ಟ ಮಕ್ಕಳಿಗೆ ಪಾಲಕರ ಪ್ರೀತಿಯ ಅಪ್ಪುಗೆ. ಇಳಿವಯಸ್ಸಿನಲ್ಲಿರುವವರಿಗೆ ತಮ್ಮ ಮಕ್ಕಳ ಭರವಸೆಯ ನೋಟ.

ನಮ್ಮ ಉಪನಿಷತ್ತುಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದ ಶಾಂತಿ ಮಂತ್ರವನ್ನು ನಮ್ಮ ಪೂರ್ವಜರು ಸದಾ ಜಪಿಸುತ್ತಿದ್ದರು. 'ಓಂ ಶಾಂತಿ ಶಾಂತಿ ಶಾಂತಿಃ'

ಬಿಳಿಯ ಪಾರಿವಾಳಗಳು ಶಾಂತಿಯ ದ್ಯೋತಕವಂತೆ. ಅವು ಹಾರುತ್ತಿರಲಿ.

ಅಮಿತಾ ಎಸ್ ಭಾಗವತ್

e-mail : amitabhagwat@gmail.com

*PAGE DONATED BY :* ***SHRI SADANANDA HEGDEKATTE MOODABIDIRE & FAMILY IN THE MEMORY OF HIS FATHER LATE V. V. HEGDEKATTE***

# ಮಾಸ ಮಹಾತ್ಮ್ಯ

✍ ಗಣಪತಿ ಭಡ್ತಿ

*(ಕಳೆದ ಸಂಚಿಕೆಯಿಂದ)*

## ಆಷಾಢ ಮಾಸ

ಚಂದ್ರನು ಪೂರ್ವಾಷಾಢಾ ನಕ್ಷತ್ರದಲ್ಲಿ ಪೂರ್ಣನಾಗುವುದರಿಂದ ಈ ಹೆಸರು ಬಂದಿದೆ. ಈ ತಿಂಗಳಲ್ಲಿ ಕರ್ಕ ಸಂಕ್ರಮಣವಾಗುತ್ತಿದ್ದು, ಈ ಸಂಕ್ರಮಣದಿಂದ ಪುಷ್ಯದಲ್ಲಾಗುವ ಮಕರಸಂಕ್ರಮಣದವರೆಗೆ ದಕ್ಷಿಣಾಯನವೆನಿಸುವುದು. ಈ ಕರ್ಕಸಂಕ್ರಾಂತಿಯ ದಿನ ಸ್ನಾನ, ದಾನ, ಉಪೋಷಣಾದಿಗಳನ್ನು ಆಚರಿಸತಕ್ಕದ್ದು. ಈ ಆಷಾಢಮಾಸದಲ್ಲಿ ಏಕಭುಕ್ತವ್ರತ ಮಾಡುವುದರಿಂದ ಪುತ್ರ, ಧನ, ಧಾನ್ಯಗಳ ಪ್ರಾಪ್ತಿಯಾಗುವುದೆಂದು ಹೇಳಿರುತ್ತದೆ. ಉಪಾನಹ, ಛತ್ರ, ಲವಣ, ನೆಲ್ಲಿಕಾಯಿಗಳ ದಾನವು ತ್ರಿವಿಕ್ರಮ ಪ್ರೀತಿಕರವೆಂದು ಹೇಳಿದೆ. ಈ ಮಾಸದ ಶುಕ್ಲದ್ವಿತೀಯೆಯು ಪುಷ್ಯನಕ್ಷತ್ರಯುಕ್ತವಾಗಿರಲಿ ಇಲ್ಲದಿರಲಿ ಆ ದಿನ ಶ್ರೀರಾಮರಥೋತ್ಸವ ಮಾಡತಕ್ಕದ್ದು.

ಈ ಮಾಸದಲ್ಲಿ ಶು. 11ಯು ವಿಷ್ಣುಶಯನೋತ್ಸವ ಅಥವಾ ಮಹಾ ಏಕಾದಶಿಯೆಂದು ಪ್ರಸಿದ್ಧವಿರುತ್ತದೆ. ಇದಲ್ಲದೆ ಶು. 15ಯ ದಿನ ಶಿವಶಯನೋತ್ಸವ, ಕೋಕಿಲಾವ್ರತ, ವ್ಯಾಸಪೂಜೆಗಳನ್ನು ಹೇಳಿದ್ದು ಅಂದಿನಿಂದ ಚಾತುರ್ಮಾಸ್ಯವ್ರತವು ಪ್ರಾರಂಭವಾಗುತ್ತದೆ.

**ಮಹಾ ಏಕಾದಶೀ :** ಈ ದಿನ ಶ್ರೀ ವಿಷ್ಣುವು ಶಯನ ಮಾಡಿ ಕಾರ್ತಿಕ ಶು. 11 ದಿನ ಎಚ್ಚರಿಕೆ ಹೊಂದುತ್ತಾನೆಂದಿರುವುದರಿಂದ ಈ ಏಕಾದಶಿಗೆ 'ಶಯನೀ' ಎಂದೂ, ಕಾರ್ತಿಕ ಏಕಾದಶಿಗೆ 'ಪ್ರಬೋಧಿನೀ' ಎಂದೂ ಹೆಸರಾಗಿರುತ್ತದೆ. ಸಾಮಾನ್ಯವಾಗಿ ಪ್ರತಿ ಮಾಸದ ಶುಕ್ಲ ಹಾಗೂ ಕೃಷ್ಣ ಪಕ್ಷಗಳ 11ನೇ ತಿಥಿಗೆ ಏಕಾದಶಿಯೆಂದು ಹೆಸರಿದ್ದು ಈ ಇಪ್ಪತ್ತನಾಲ್ಕು ಏಕಾದಶಿಗಳಲ್ಲಿ ವೈಷ್ಣವ, ಸ್ಮಾರ್ತ, ಸೌರ ಮತಾನುಯಾಯಿಗಳು ಉಪೋಷಣಾದಿ ವ್ರತಗಳನ್ನಾಚರಿಸುತ್ತಾರೆ.

ದಶಮೀ ದಿನ ಏಕಭುಕ್ತವಾಗಿದ್ದು ಏಕಾದಶೀ ದಿನ ಉಪೋಷಣ ಮಾಡತಕ್ಕದ್ದು. ಈ ದಿನ ಶ್ರೀವಿಷ್ಣುವಿನ ಚತುರ್ಭುಜ ಮೂರ್ತಿಯನ್ನು ಲಕ್ಷ್ಮೀಸಹಿತ ಮಂಚದಲ್ಲಿಟ್ಟು ಪೂಜಿಸತಕ್ಕದ್ದು. ರಾತ್ರೆ ಜಾಗರಣೆ ಮಾಡಿ ಹರಿಭಜನದಲ್ಲಿ ಕಾಲ ಕಳೆಯತಕ್ಕದ್ದು. ದ್ವಾದಶೀ ದಿನ ಬೆಳಿಗ್ಗೆ ಐದು ಗಳಿಗೆಗಳೊಳಗಾಗಿ ಪಾರಣ ಮಾಡತಕ್ಕದ್ದು. ಏಕಾದಶೀ ದಿನ ಸಮುದ್ರ ಸ್ನಾನ ಮಾಡುವುದು. ಶ್ರೀವಿಷ್ಣುವಿಗೆ ತುಲಸೀ ಮಾಲೆಯನ್ನರ್ಪಿಸಿ ಆ ಪ್ರಸಾದದ ಮಾಲೆಯನ್ನು ತಾನು ಧಾರಣ ಮಾಡತಕ್ಕದ್ದು. ದಶಮೀ, ಏಕಾದಶೀ, ದ್ವಾದಶೀ ಈ ಮೂರು ದಿವಸಗಳಲ್ಲಿ ವಿಷಯೋಪರಾಗಗಳನ್ನು ತೊರೆದು ಹರಿಚಿಂತನದಲ್ಲಿ ಕಾಲಕಳೆಯತಕ್ಕದ್ದು. ಆಷಾಢ ಹಾಗೂ ಕಾರ್ತಿಕ ಏಕಾದಶೀ ದಿನಗಳಲ್ಲಿ ವೈಷ್ಣವರು ತಪ್ತಮುದ್ರಾಧಾರಣ ಮಾಡುವರು. ಆಷಾಢ ಶು. 12 ದಿನ ಶ್ರೀ ವಾಮನ ಮೂರ್ತಿಯನ್ನು ಪೂಜಿಸತಕ್ಕದ್ದು.

ಎಲ್ಲ ಏಕಾದಶಿಗಳಲ್ಲೂ ಸ್ಮಾರ್ತ, ವೈಷ್ಣವ ಅಥವಾ ಭಾಗವತವೆಂಬ ಎರಡು ಸಾಂಪ್ರದಾಯಗಳಿರುತ್ತವೆ. ಈ ವ್ರತವನ್ನು ಸ್ಮಾರ್ತರೂ ವೈಷ್ಣವರೂ ಪಾಲಿಸುವರು. ಬಹುಶಃ ಎಲ್ಲ ವರ್ಣದವರೂ ಈ ವ್ರತದಲ್ಲಿ ಭಕ್ತಿಯುಳ್ಳವರಿರುವರು. ಕೆಲವರು ಏಕಾದಶೀ ದಿನ ಏಕಭುಕ್ತ ಮಾಡುವರು. ದೇಶಪರತ್ವದಿಂದ ಈ ದಿನ ಕೆಲಕೆಲವು ಪದಾರ್ಥಗಳು ವರ್ಜ್ಯಗಳಾಗಿರುತ್ತವೆ. ಕೆಲವು ಸ್ಥಳಗಳಲ್ಲಿ ಅಕ್ಕಿಯನ್ನು ಸೇವಿಸದಿದ್ದರೆ ಕೆಲವರು ಗೋಧಿಯನ್ನು ಸೇವಿಸರು. ಇಂಥ ಉಪೋಷಣದ ದಿನಗಳಲ್ಲಿ ಅನೇಕ ಮಿಷ್ಟ ಪದಾರ್ಥಗಳನ್ನೂ ಹಣ್ಣು ಹಂಪಲಗಳನ್ನೂ ಯಥೇಷ್ಟ ತಿಂದು (ನಿತ್ಯದ ಅನ್ನಗ್ರಹಣ ಮಾಡದೇ ಇದ್ದ ಮಾತ್ರದಿಂದ) ತಾವು ಉಪೋಷಣ ದಿಂದಿದ್ದೇವೆಂದು ತಿಳಿಯುವವರೇ ಬಹಳ. ಶ್ರೀವಿಷ್ಣುವಿನ ಪ್ರಸಿದ್ಧ ದೇವಾಲಯಗಳಿರುವಲ್ಲಿ ಇಂಥ ಏಕಾದಶಿಗಳಲ್ಲಿ ಯಾತ್ರೆ ಕೂಡುತ್ತದೆ.



**ಏಕಾದಶಿಯ ಉತ್ಪತ್ತಿ :-** ಕುಂಭನೆಂಬ ದೈತ್ಯನ ಮಗನಾದ ಮೃದು ಮನ್ಯನೆಂಬವನು ತಾನು ಅಮರನಾಗುವಂತೆ ಈಶ್ವರನಿಂದ ವರವನ್ನು ಪಡೆದು ಎಲ್ಲ ದೇವತೆಗಳಿಗೂ ಅಜಿಂಕ್ಯನಾದನು. ಇದರಿಂದ ದೇವತೆಗಳು ಹೆದರಿ ತ್ರಿಕೂಟಪರ್ವತದಲ್ಲಿ ಒಂದು ನೆಲ್ಲಿಗಿಡದ ಬುಡದಲ್ಲಿರುವ ಗುಹೆಯಲ್ಲಿ ಅಡಗಿ ಕುಳಿತರು. ಇವರಿಗೆ ಆಹಾರವು ಸಿಗದ್ದರಿಂದ ಉಪೋಷಣವೂ ಮಳೆಯಲ್ಲಿ ತೊಯ್ದದ್ದರಿಂದ ಸ್ನಾನವೂ ಘಟಿಸಿದ್ದವು. ಈ ಎಲ್ಲ ದೇವತೆಗಳು ದುಃಖದಿಂದ ತೆಗೆದ ಉಚ್ಛ್ವಾಸದ ಏಕೀಕರಣದಿಂದ ಒಂದು ಶಕ್ತಿಯು ಉತ್ಪನ್ನವಾಗಿ ಆ ಶಕ್ತಿಯು ಆ ಗುಹೆಯ ಬಾಗಿಲಲ್ಲಿ ಕಾದಿರುವ ಮೃದುಮನ್ಯನನ್ನು ನಾಶಮಾಡಿ ದೇವತೆಗಳನ್ನು ಕಷ್ಟದಿಂದ ಮುಕ್ತ ಮಾಡಿತು. ಈ ಶಕ್ತಿಯೇ ಏಕಾದಶೀದೇವಿಯು. ಇವಳಲ್ಲಿ ಎಲ್ಲ ದೇವತೆಗಳ ಶಕ್ತಿಯು ಕೂಡಿರುವುದರಿಂದ ಸ್ಮಾರ್ತ, ವೈಷ್ಣವ, ಸೌರ ಮತಾನುಯಾಯಿಗಳೂ ಈ ಏಕಾದಶೀ ವ್ರತದಲ್ಲಿ ಭಕ್ತಿಯುಳ್ಳವರಾದರು.

ಈ ಪ್ರಕಾರ ಏಕಾದಶಿಯ ಉತ್ಪತ್ತಿಯು ಎಲ್ಲ ದೇವತೆಗಳ ನಿಃಶ್ವಾಸದಿಂದ ಆಯಿತೆಂದಿದ್ದರೂ ಈ ದಿನ ಶ್ರೀವಿಷ್ಣುವೇ ಪೂಜ್ಯದೈವತನಾಗಿದ್ದಾನೆ. ಈ ಜಗತ್ತಿನಲ್ಲಿ ಆಯಾಯ ಕಾಲಕ್ಕೆ ಅಧರ್ಮವನ್ನು ಉಚ್ಚಾಟನೆ ಮಾಡಿ ಸಧರ್ಮಪಾಲನೆಯ ಕಾರ್ಯವು ಶ್ರೀವಿಷ್ಣುವಿನ ಅಂಶಗಳಿಂದ ಅಥವಾ ಅವತಾರಗಳಿಂದ ಆಯಿತೆಂದು ಪುರಾಣಗಳಿಂದ ತಿಳಿಯುತ್ತದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನ - यद्यद्विभूतिमत्सत्वं श्रीमदूर्जितमेव वा। तत्तदेवावगच्छ त्वं तेजोंऽशसंभवम् 'ಈ ಜಗತ್ತಿನಲ್ಲಿ ವಿಶೇಷ ಪ್ರಭಾವಶಾಲಿಗಳಾದವೆಲ್ಲ ತನ್ನ (ಅಂದರೆ ಶ್ರೀವಿಷ್ಣುವಿನ) ಅಂಶಭೂತಗಳೆಂದು ತಿಳಿ' ಎಂದು ಹೇಳಿರುವನು. ಇದರ ಮೇಲಿಂದ ಪ್ರಾಚೀನ ಆರ್ಯರಲ್ಲಿ ಶ್ರೀವಿಷ್ಣುವಿನ ಬಗ್ಗೆ ವಿಶೇಷ ಆದರಭಾವವಿತ್ತೆಂಬದು ಸ್ಪಷ್ಟವಾಗುತ್ತದೆ.

ವೇದಕಾಲದಲ್ಲಿ ವಿಷ್ಣುವಿನ ಸಂಬಂಧದ ವಿಚಾರವು ಈಗಿನಂತೆ ಇದ್ದಿಲ್ಲ. ವೇದಗಳಲ್ಲಿ ವಿಷ್ಣುವೆಂಬ ಹೆಸರು ಸೂರ್ಯನಿಗೆ ಬಂದಿದ್ದು ಈ ವ್ಯಾಪಕನೂ, ಪ್ರಕಾಶಮಯನೂ ಆದ ಸೂರ್ಯನೇ ಎಲ್ಲ ಸ್ಥಿರ ಚರಸೃಷ್ಟಿಯ ಪೋಷಣೆಗೆ ಕಾರಣನಾಗಿರುವನೆಂದು ಮನ್ನಿಸಿದ್ದರಿಂದ ಈ ಸೂರ್ಯರೂಪೀ ವಿಷ್ಣುವಿನ ಅನೇಕ ಸ್ತುತಿಪರ ಸೂಕ್ತಗಳು ವೇದಗಳಲ್ಲಿ ಕಂಡು ಬರುತ್ತವೆ.

*(ಮುಂದುವರಿಯುವುದು)*

PAGE DONATED BY : **HEGDE HOSPITAL, CHEMBUR**, COURTESY : **DR. DINESH HEGDE**

# ಮೇಘದೂತವನ್ನು ಕನ್ನಡಕ್ಕಿಳಿಸಿದ ಕನ್ನಡ ಕಣ್ಮಣಿಗಳು

✍ ಶೈಲಜಾ ಹೆಗಡೆ, ಮುಂಬಯಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

**ಕನ್ನಡ ಮೇಘದೂತ** : ಸಾಲಿ ರಾಮಚಂದ್ರರಾಯ : ಸಾಲಿ ರಾಮಚಂದ್ರ ರಾಯರು ಕನ್ನಡದ ವಿಶಿಷ್ಟ ಕವಿ. ಇವರು ಜನಿಸಿದ್ದು ರಾಮದುರ್ಗದಲ್ಲಿ. ಎಳವೆಯಲ್ಲೇ ತಂದೆ ತಾಯಿಯರನ್ನು ಕಳೆದುಕೊಂಡು ತಬ್ಬಲಿಯಾದ ಇವರಿಗೆ ಹಲವು ಕಷ್ಟ-ಕೋಟಲೆಗಳನ್ನು ಅನುಭವಿಸಬೇಕಾಯಿತು. ಸ್ವಲ್ಪಕಾಲ ಅಂಚೆ ಕಛೇರಿಯಲ್ಲಿ ಕೆಲಸ ಮಾಡಿ, ನಂತರ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದರು. ಇವರ ವಿದ್ಯಾಭ್ಯಾಸ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ನಡೆಯಿತು. ಇವರು ಧಾರವಾಡದ ಜಯಕರ್ನಾಟಕ ಪತ್ರಿಕೆಯ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಸಂಸ್ಕೃತ ಮತ್ತು ಕನ್ನಡ ಇವೆರಡೂ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ ಸಾಲಿ ರಾಮಚಂದ್ರ ರಾಯರು ಗುಜರಾತಿ, ಮರಾಠಿ, ಇಂಗ್ಲೀಷ್, ರಶಿಯನ್ ಮುಂತಾದ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಈ ಭಾಷೆಗಳ ಕೃತಿಗಳನ್ನು ಅವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಹೊಸಗನ್ನಡದಲ್ಲಿ ರಾಮಾಯಣವನ್ನು ಕುರಿತ ಮಹಾಕಾವ್ಯವನ್ನು ರಚಿಸಿದ್ದಾರೆ. ಇವರು ರಚಿಸಿದ ಕವಿತಾ ಸಂಕಲನ ಚಿತ್ರಸೃಷ್ಟಿ 1940ರಲ್ಲಿ ಪ್ರಕಟವಾಯಿತು. ಇದಲ್ಲದೆ, ಬಾನುಲಿ ರೂಪಕ, ಕಾದಂಬರಿ, ಮಕ್ಕಳ ಕಥೆ ಮುಂತಾದವುಗಳನ್ನು ಬರೆದು ಪ್ರಕಾಶಪಡಿಸಿದ್ದಾರೆ. ಅಭಿಸಾರಮ್, ಸುದಾಮಚರಿತಮ್, ಶರಣಾಗತಿಃ, ಗದ್ಯ ರಾಮಾಯಣಮ್ ಮೊದಲಾದ ಸಂಸ್ಕೃತ ಕೃತಿಗಳೂ ಮೂಡಿಬಂದಿವೆ.

ಸಾಲಿ ರಾಮಚಂದ್ರರಾಯರು 1944ರಲ್ಲಿ ಕಾಳಿದಾಸನ ಮೇಘದೂತವನ್ನು 'ಕನ್ನಡ ಮೇಘದೂತ'ವೆಂಬ ನಾಮದಿಂದ ಹೊಸಗನ್ನಡ ಶೈಲಿಯಲ್ಲಿ ಕನ್ನಡಕ್ಕೆ ಅನುವಾದಿಸಿದರು. ಸರಳ ಪದಪುಂಜಗಳಿಂದ ಕೂಡಿದ ಈ ಕಾವ್ಯ ಪೂರ್ವಮೇಘ ಮತ್ತು ಉತ್ತರಮೇಘವೆಂದು ವಿಭಾಗಿಸಲ್ಪಟ್ಟಿದೆ.

ಇದು ಒಟ್ಟು 222 ಪದ್ಯಗಳನ್ನೊಳಗೊಂಡಿದೆ. ಮೊದಲನೆಯ ಪದ್ಯದಲ್ಲಿ,

> ತೊಡವು ಸಕ್ಕದ ಹೊನ್ನಿನಿಂದ ಮಾಡಿದುದು, ಕ
> ನ್ನಡ ತಾಯೆ, ಸಮೆದವನು ನಿನ್ನ ಮಗನು
> ತೊಡುವುದೌ ನಲುಮೆಯಿಂದಮ್ಮ, ನನ್ನಮ್ಮ,
> ನಿನ್ನಡಿಯೆಡೆಯೊಳಳ್ತಿಯಿಂದಿಡುವೆನಿದನು.

'ತೊಡವು ಸಕ್ಕದ ಹೊನ್ನಿನಿಂದ ಮಾಡಿದುದು' - ಈ ಕಾವ್ಯವೆಂಬ ತೊಡುಗೆ ಸಂಸ್ಕೃತ ಹೊನ್ನಿನಿಂದ ಮಾಡಿದುದು. ನಲುಮೆಯಿಂದ ಇದನ್ನು ತೊಡಬೇಕೆಂದೂ, ಇದನ್ನು ಸಮೆದವನು ನಿನ್ನ ಮಗನೆಂದೂ ಕವಿಯು ಕನ್ನಡ ತಾಯಿಯಲ್ಲಿ ನಿವೇದಿಸಿಕೊಂಡಿದ್ದಾರೆ. ಮುಂದಿನ ಪದ್ಯದಲ್ಲಿ,

> ನನ್ನ ನಾಡಿನ ಕೀರ್ತಿಕೇತು, ಸೌಭಾಗ್ಯನಿಧಿ,
> ನಿನ್ನಡಿಗೆ ಬಾಗುವೆನು, ಕಾಳಿದಾಸಾ, !
> ಮುನ್ನ ನೀನೊರೆದ ಕೃತಿಯನು ನಲಿದು ಹಾಡುವೆನು
> ಕನ್ನಡದಲ್ಲಿಂದು, ಕವಿತಾವಿಲಾಸಾ ॥

ಎಂದು ನಾಡಿನ ಕೀರ್ತಿ ಪತಾಕೆಯನ್ನು ಗಗನಚುಂಬಿಯಾಗಿ ಹಾರಿಸಿದ ಸೌಭಾಗ್ಯನಿಧಿಯಾದ ಕಾಳಿದಾಸನನ್ನು ಕವಿ ಶಿರಬಾಗಿ ನಮಿಸಿದ್ದಾರೆ. ಆತನನ್ನು 'ಕವಿತಾವಿಲಾಸ'ನೆಂದು ಸಂಬೋಧಿಸಿದ್ದಾರೆ.

ಪ್ರತಿಪದ್ಯದ ಒಂದು ಮತ್ತು ಮೂರನೆಯ ಸಾಲುಗಳಲ್ಲಿ 20 ಮಾತ್ರೆಗಳು ಹಾಗೂ ಎರಡು ಮತ್ತು ನಾಲ್ಕನೆಯ ಸಾಲುಗಳಲ್ಲಿ ಐದು ಮಾತ್ರೆಯ ಮೂರು ಗುಂಪುಗಳು, ಒಂದು ಗುರು, ಎಂದರೆ 17 ಮಾತ್ರೆಗಳು, ಒಟ್ಟು 74 ಮಾತ್ರೆಗಳ ಒಂದು ಪದ್ಯವನ್ನುಳ್ಳ ಕಾವ್ಯವನ್ನು ರಾಮಚಂದ್ರರಾಯರು ರಚಿಸಿದ್ದಾರೆ. ಈ ಪದ್ಯವನ್ನು ಆರು ಸಾಲುಗಳಲ್ಲಿ ವಿಂಗಡಿಸಿ ಬರೆದಾಗ ಅದು ಕುಸುಮ ಷಟ್ಪದಿಯ ಸ್ವರೂಪವನ್ನು ಹೊಂದುತ್ತದೆ. ಮೂಲಕೃತಿಯ ಶ್ಲೋಕದ ಸಂಪೂರ್ಣ ಅರ್ಥವನ್ನು ಒಂದೇ ಪದ್ಯದಲ್ಲಿ ವಿವರಿಸುವುದು ಅಸಾಧ್ಯವಾದುದರಿಂದ ಕವಿ ಒಂದು ಶ್ಲೋಕದ ಅರ್ಥವಿವರಣೆಗೆ ಎರಡು ಪದ್ಯಗಳನ್ನು ಬಳಸಿಕೊಂಡಿದ್ದಾರೆ.



ದೃಷ್ಟಾಂತವಾಗಿ, ಮುಂದಿನ ಪದ್ಯಗಳನ್ನು ಗಮನಿಸಬಹುದು.

"ರತ್ನಚ್ಛಾಯಾ ವ್ಯತಿಕರ ಇವ ಗೋಪವೇಷಸ್ಯ ವಿಷ್ಣೋಃ" - ಎಂಬ ಉಪಮಾಲಂಕಾರ ಶ್ಲೋಕವನ್ನು ತಮ್ಮ ಅನುವಾದ ಕಾವ್ಯದಲ್ಲಿ ಕವಿ ಎರಡು ಪದ್ಯಗಳಲ್ಲಿ ವಿವರಿಸಿದ್ದಾರೆ.

> ಬಿದಿಯ ಕೃತಿಕೌಶಲವನೆಂತು ಬಣ್ಣಿಸುವೆನೋ !
> ಇದು ರತ್ನದೀಪ್ತಿಗಳ ಸಂಮಿಲನವೋ?
> ಇದಿರ ವಲ್ಮಿಕಾಗ್ರದಿಂದೊಗೆದು ಕಣ್ಗೊಳಿಪು-
> ದಿದು ಬಾನ ತೋರಣವೋ? ಇಂದ್ರಧನುವೋ?

> ಎನಿತು ಪೆರ್ಚಿದುದಮಮ ನಿನ್ನದೀ ಶ್ಯಾಮವಪು-
> ವಿನ ಕಾಂತಿಯೀಯಿಂದ್ರಧನುವಿನಿಂದೆ!
> ನೆನೆವೆಯಾ ಎಂತಾಯ್ತು ಗೋಪವೇಷದ ವಿಷ್ಣು-
> ವಿನ ದಿವ್ಯತನು ನವಿಲ ಹೀಲಿಯಿಂದೆ.

ಪ್ರಾಸದ ಜೊತೆಗೆ ಪ್ರಶ್ನಾರ್ಥಕ ರೂಪದಲ್ಲಿ ಅರ್ಥಸ್ಪಷ್ಟನೆ ರಾಮಚಂದ್ರರಾಯರ ಕಾವ್ಯದ ಇನ್ನೊಂದು ವೈಶಿಷ್ಟವಾಗಿದೆ. ಕಾವ್ಯದ ಹೆಚ್ಚಿನ ಪದ್ಯಗಳಲ್ಲಿ ಪ್ರಶ್ನೆಗಳ ಮೂಲಕ ಅರ್ಥ ನಿರೂಪಣೆ ಮಾಡಿರುವುದು ಕಂಡುಬರುತ್ತದೆ. 'ಗಗನದಲಿ ನಿಲ್ಲರೆ ನೋಡಲಿದನಮರ ದಂಪತಿಗಳು', 'ಇರುವವನೆ ಕಣ್ಣೋಲದರಸಿಕನು ಮತ್ತದರ ನರುಗಂಪಿಗೊಲಿಯದನು ವಿಶ್ವದೊಳಗೆ?', ಸುಲಭವೇ ಈವಗೆಯ ಸೊಬಗು?, ಬಳಿಕುಂಟೆ ಆಸ್ಪದವು ಮಂದಗತಿಗೆ? ಮೊದಲಾದವುಗಳನ್ನು ಉದಾಹರಿಸಬಹುದು.

ಅಲ್ಲದೆ, ರಾಮಚಂದ್ರರಾಯರ ಕಾವ್ಯದಲ್ಲಿ ಜಲರುಹ, ಅಂಭೋಜ, ಜಲದ, ಜಲಧರ ಮುಂತಾದ ಕೆಲವು ಸಂಸ್ಕೃತ ಪದಗಳನ್ನು ಬಿಟ್ಟರೆ, ಅಚ್ಚಗನ್ನಡ ಪದಗಳ ಬಳಕೆಯನ್ನು ಗುರುತಿಸಬಹುದು. ಜನಪದವಧು ಎಂಬ ಮೂಲಶಬ್ದಕ್ಕೆ ಒಕ್ಕಲಿತಿಯರು ಪದಪ್ರಯೋಗ, ಕೃಷಿಫಲಮಿತಿ ಭ್ರೂವಿಕಾರಾನಭಿಜ್ಞೈಃ ಎನ್ನುವ ಮಾತನ್ನು ಪುಷ್ಟೀಕರಿಸುತ್ತದೆ. ಚರ್ಮಣ್ವತಿ ನದಿಯ ನೀರನ್ನು ಮೇಘ ಕುಡಿಯಲೆಳಸಿದಾಗ, ಆ ನದಿಯ ನೀರು ದೂರ ಗಗನದಿಂದ ವೀಕ್ಷಿಸುವ ಖೇಚರರಿಗೆ ಭೂದೇವಿಯ ಹಾರದಂತೆಯೂ, ಮೇಘವು ಹಾರದ ನಡುವೆ ಶೋಭಿಸುವ ಇಂದ್ರನೀಲ ಮಣಿಯಂತೆಯೂ ತೋರುವುದೆಂಬ ಉತ್ಪ್ರೇಕ್ಷಾಲಂಕಾರಯುಕ್ತ ಪದ್ಯದಲ್ಲಿ 'ಧರೆಧರಿಸಿದೆಕ್ಕಸರವೆಂಬಂತೆ' ಪದಪ್ರಯೋಗ, ಹಿಮಾಲಯದಿಂದ ಹರಿದುಬರುವ ಪಾವನ ಗಂಗೆ ಕನಖಲದ ಬಳಿಯಲ್ಲಿ ಹರಿಯುತ್ತ ಸಗರಪುತ್ರರಿಗೆ ಸ್ವರ್ಗಪದವಿಯನ್ನು ದೊರಕಿಸಿ ಕೊಟ್ಟ ಪುರಾಣ ಕಥೆಯನ್ನು ವಿವರಿಸುವ ಸಂದರ್ಭದ ಪದ್ಯದಲ್ಲಿ 'ಭಳಿರೆ, ಪಾವನತೋಯೆ' ಮತ್ತು

*PAGE DONATED BY :* ***SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

# The Essence of Bhagavad-Gita

✍ **Shraddha Hegde** **(BE-Engg)**



**Bhakti Yoga :** Shri Krishna who had described himself as imperishable and invisible to our senses had shown his cosmic form to Arjuna. So now, Arjuna tries to settle the question as to whether its better to have devotional love or to worship the unmanifest God. Shri Krishna declares both paths eventually lead to him. However, devotees who worship his personal form with faith, fixing their mind on him is considered to be the most perfect in yoga. It is rather difficult to meditate upon the nirguna Ishvara as one should have complete mastery over his senses. To become perfect in yoga, one should start with smaller steps as "Path of Devotion" also needs consistent effort. If one is unable to absorb his mind completely in God, he should start working for God. If that is also difficult then, he should renounce all fruits of his action as it immediately leads to peace of mind. Thus, one who shows equanimity in all circumstances, is a kind friend to all, self-controlled and meditating solely on God is loved the most by Krishna.

The rest of the chapter describes all the wonderful qualities of devotees who are dear to Krishna. These qualities inspire us to acquire at least some of those qualities. Thus, the seed of Bhakti-yoga which was planted in the end of last chapter has expounded here.

*(To be continued...)*

---

'ವಿಶ್ವವಿನುತೆ ಜಾಹ್ನವಿ' ಎಂದು ಗಂಗಾಮಾತೆಯನ್ನು ಸಂಬೋಧಿಸಿರುವುದು, ಯಕ್ಷ ಕಳುಹಿದ ಸಂದೇಶವನ್ನು ಆತನ ಪತ್ನಿಗೆ ಅರುಹುವ ಸಂದರ್ಭದಲ್ಲಿ 'ಪತಿಯ ಕೌಶಲದೊಸಗೆಯನು, ತಾಯೆ, ತಂದಿರುವೆನು' ಎಂಬ ನುಡಿಗಳಲ್ಲಿ 'ತಾಯೆ' ಪದಪ್ರಯೋಗ, ಮೊದಲಾದವು ಅತ್ಯಂತ ಔಚಿತ್ಯ ಪೂರ್ಣವಾಗಿವೆ. ಇದು ವಾಲ್ಮೀಕಿ ರಾಮಾಯಣದಲ್ಲಿಯ, ಆಂಜನೇಯನ ಮೂಲಕ ಸಂದೇಶವನ್ನು ಕಳುಹಿಸಿದ ಸಂದರ್ಭವನ್ನು ನೆನಪಿಸುತ್ತ, ಕವಿ ಕಾಳಿದಾಸ ವಾಲ್ಮೀಕಿ ರಾಮಾಯಣದಿಂದ ಪ್ರಭಾವಿತನಾಗಿದ್ದನೆಂಬ ವಿದ್ವಾಂಸರ ಮತವನ್ನು ಸಮರ್ಥಿಸುತ್ತದೆ. ಸಾಂಕೇತಿಕವಾಗಿ ಧ್ವನ್ಯಾರ್ಥವನ್ನು ಹೊರಗೆಡಹುವಲ್ಲಿ ರಾಮಚಂದ್ರರಾಯರು ತಮ್ಮ ವಿಶಿಷ್ಟ ಪ್ರತಿಭೆಯನ್ನು ಮೆರೆದಿದ್ದಾರೆ. ಇವಲ್ಲದೆ,

'ಹೊಸದಾಸಳದ ಹೂವ ಹಸೆಯನೇ ಬಾನ್ನೀರೆ-
ಯೊಸೆದು ರಚಿಸಿಹಳೊ ಎನೆ ಸಂಜೆಗೆಂಪು
'ತೊರೆದು ರತ್ನಾಕರವನೆಲ್ಲ ರತ್ನಗಳಿಲ್ಲಿ
ನೆರೆದಿರಲು ತನಗಿದುವೆ ತವರೆಂಬಳು'
'ಉಳಿವುದೈ ಸಾಧುವಿನ ಹೃದಯದಂತೀ ಕೊಳದ
ಜಳವಮಲವದನು ಸೋಂಕದು ಪಂಕವು'

ಮೊದಲಾದ ಸಾಲುಗಳಲ್ಲಿ ಕವಿಯ ಕಾವ್ಯ ಕೌಶಲವನ್ನು ಕಾಣಬಹುದು. ಮುಂದೆ, 'ಅಗಲುವುದನೇಕೆ ಬಿದಿ ಮಾಡಿದನೋ? ಇನಿತರೊಳೆ ಅಗಲಬೇಕಾಯ್ತೋ ಈ ಗಿರಿವರನು' ಎಂಬ ಸಾಲುಗಳಲ್ಲಿ ಅಗಲುವಿಕೆಯು ಸಹಜ ಕ್ರಿಯೆಯಾದರೂ, ಅಗಲುವಿಕೆಯ ಅಸಹನೀಯ ಅನುಭವ ಎಲ್ಲರನ್ನೂ ತಲ್ಲಣಗೊಳಿಸುತ್ತದೆ. ಅಗಲುವಿಕೆಯನ್ನು ವಿಧಿ ಏಕೆ ಮಾಡಿದನೆಂಬ ಕವಿಯ ಪ್ರಶ್ನೆ ಸಾರ್ವತ್ರಿಕವಾದುದು. ರಾಮಚಂದ್ರರಾಯರು ಈ ಸಂದರ್ಭವನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಅಂತೆಯೇ, 'ಇನಿಯನಪರಾಧಿಯಾಗಿಹನೆಂದು ನೊಂದು', 'ಇರುಳು ನಲಿನಿಯನಗಲಿ ನೋಯಿಸಿದೆನೆನುತ ಭಾಸ್ಕರನು' ಎಂಬ ಸಾಲುಗಳಲ್ಲಿ, ಮೂಲ ಕಾವ್ಯದ, ವಂಚಿತರಾದ ಖಂಡಿತೆಯರನ್ನು ಸಮಾಧಾನಗೊಳಿಸಲು ಉದಯಕಾಲದಲ್ಲಿ ಅವರ ರಮಣರು ತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ. ಹಾಗೆಯೇ ಸೂರ್ಯನೂ ತನ್ನ ಸಾವಿರ ಕರಗಳಿಂದ ಪದ್ಮಿನಿಯರ ಕಣ್ಣೀರನ್ನು ಒರೆಸುತ್ತಾನೆ ಎಂಬ ಪದ್ಯದ ಅರ್ಥವನ್ನು ಸಾಲಿಯವರು, ಇನಿಯನು ಸ್ವತಃ ತನ್ನ ಅಪರಾಧವನ್ನು ತಿಳಿದು, ನೊಂದು ಪ್ರಿಯತಮೆಯ ಬಳಿಗೆ ಹಿಂದಿರುಗುತ್ತಾನೆ. ಭಾಸ್ಕರನೂ ನಲಿನಿಯನ್ನು ನೋಯಿಸಿದೆನೆಂಬ ಪಶ್ಚಾತ್ತಾಪದಿಂದ ಉದಯ ಕಾಲದಲ್ಲಿ ಸಾವಿರ ಕಿರಣಗಳನ್ನು ಚಾಚಿ ಆಗಮಿಸುತ್ತಾನೆ ಎಂಬ ಅರ್ಥವನ್ನು ಧ್ವನಿಸುವ ಮೂಲಕ ಮೂಲಾರ್ಥಕ್ಕೆ ಹೆಚ್ಚಿನ ಸೊಬಗನ್ನು ನೀಡಿದ್ದಾರೆ. ಸಂದರ್ಭೋಚಿತವಾದ ಲಲಿತಪದ ಪ್ರಯೋಗಗಳಲ್ಲೂ ಸಾಲಿಯವರು ಕುಶಲರು. ಇವರು ಕಾವ್ಯದಲ್ಲಿ ಬಳಸಿದ ಅಕಟಕಟ, ಭಳಿರೆ ಮೊದಲಾದ ಪದಗಳೂ ಕೇವಲ ಉದ್ಗಾರವಾಚಕಗಳಾಗಿರದೆ, ಸಂದರ್ಭಕ್ಕೆ ತಕ್ಕ ಪದಪುಂಜಗಳಾಗಿದ್ದು, ಕಾವ್ಯಕ್ಕೆ ದೃಶ್ಯರೂಪವನ್ನು ನೀಡಿವೆ. ಹೀಲಿ, ಮಾರ್ಪೊಳೆ, ನೀರ್ಗುಡಿ, ಕರಮಸೆ, ಹದುಳ, ಉಗ್ಗಡ ಮುಂತಾದ ಹಳಗನ್ನಡ ಪದಗಳು ಕಾವ್ಯ ಸಂಯೋಜನೆಗೋ, ಕಾವ್ಯ ಸೌಂದರ್ಯವನ್ನು ವರ್ಧಿಸಲೋ ಎಂಬಂತೆ ಅಲ್ಲಲ್ಲಿ ಬಳಕೆಯಾಗಿವೆ. ಸಾಲಿ ರಾಮಚಂದ್ರ ರಾಯರ ಸಾಹಿತ್ಯ ಸೇವೆಯನ್ನು ಗುರುತಿಸಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತ ಸರಕಾರದಿಂದ ಮನ್ನಣೆಯೇ ಮೊದಲಾದ ಅನೇಕ ಪುರಸ್ಕಾರಗಳು ದೊರೆತಿವೆ. ಸಾಲಿಯವರ ಅನೇಕ ಕೃತಿಗಳು, ಲೇಖನಗಳು, ಸಂಪಾದಿತ ಕೃತಿಗಳು ಬೆಳಕು ಕಂಡಿವೆ. ಅವರ ಕುರಿತ ಅಧ್ಯಯನಗಳೂ ಸಾಕಷ್ಟು ನಡೆದಿವೆ.

*(ಮುಂದುವರಿಯುವುದು)*

*PAGE DONATED BY :* ***SHRI N. R. HEGDE, DOMBIVLI***

# ಮೃಗನಯನಾ

✍ ಡಾ. ಜಯಂತ ಕಾಯ್ಕಿಣಿ

*(ಕಳೆದ ಸಂಚಿಕೆಯಿಂದ)*

‘ಆದಿ ಪೋಟೋಬಾ..ನಂತರ ವಿಠೋಬಾ..’ (ಮೊದಲು ಹೊಟ್ಟೆರಾಯ... ನಂತರ ವಿಠ್ಠಲರಾಯ) ಎಂದು ಹೇಳುತ್ತ ಎಲ್ಲ ಪೊಟ್ಟಣಗಳನ್ನು ಇಸ್ತ್ರಿ ಉಡುಪು ಕಟ್ಟುವ ಬಟ್ಟೆಯಲ್ಲಿ ಕಟ್ಟುತ್ತಿದ್ದ ಅತ್ತೆಯನ್ನು ನೋಡುತ್ತಿದ್ದ ಚಂದಾಗೆ..ಒಮ್ಮೆಲೇ...ಅತ್ತೆಯನ್ನೂ ಹಸ್ತಾಕ್ಷರನನ್ನೂ ಒಲೆಯ ಸುತ್ತಣ ಲೋಕವನ್ನೂ ತುಂಬ ದೂರದಿಂದ ನೋಡುತ್ತಿರುವಂತೆ ಭಾಸವಾಯಿತು. ಅತ್ತೆ ಯಮುನಾಬಾಯಿ ಮತ್ತು ಮಗ ಹಸ್ತಾಕ್ಷರ ಇಬ್ಬರೂ ಪುಟ್ಟ ಮಕ್ಕಳಂತೆ ಮನೆ ಆಟದಲ್ಲಿ ತನ್ಮಯರಾಗಿರುವಂತೆ ತೋರಿತು. ಹೊರಗೆ ಹಿಂಡಿದ ಬಟ್ಟೆಗಳನ್ನು ನೀಲಿ ಬೆರೆಸಿದ ನೀರಿನಲ್ಲಿ ಅದ್ದಿ ತೆಗೆದು ಕೊಡವಿ ಹರವುತ್ತಿರುವ ಗಂಡ ದಿಗಂಬರನೂ ಎಟುಕಲಾರದಷ್ಟು ದೂರದಲ್ಲಿದ್ದಾನೆ. ಎಲ್ಲವೂ ಆಟಿಗೆ ಅಂಗಡಿಯಂತೆ ಕಾಣುತ್ತಿದೆ. ಆಕಾಶದ ನೀಲಿಯೇ ಆ ನೀರಿನ ತೊಟ್ಟಿಯಲ್ಲಿ ಕರಡಿದಂತಿದೆ...ಇಲ್ಲಿ ಈ ಆಟದಲ್ಲಿ ನನ್ನ ಪಾಲು ಮುಗಿಯಿತೆ..ಇಷ್ಟು ದಿನ ಅಂಚಿನಲ್ಲೇ ನಡೆದುಕೊಂಡು ಬಂದೆನೆ..ಕೊಡವಿಕೊಂಡ ಉಡುಪಿನಂತೆ ಯಾಕೆ ಸರಕ್ಕನೆ ದೂರವೂ ನಿಷ್ಪಾಪವೂ ಆಗಿ ತೋರುತ್ತಿದೆ ಎಲ್ಲ... ‘ಇಲ್ಲಿ ಕೊಡಿ ಫರಾಳದ ಮೂಟೆ. ನಾನೇ ಹೊತ್ತುಕೊಂಡು ದಿಂಡಿಯನ್ನು ಸೇರಿಕೊಳ್ಳುತ್ತೇನೆ. ಆಯೀ ನಿಮ್ಮ ಕಾಲಿಗೆ ಬೀಳುತ್ತೇನೆ. ಈ ಕ್ಷಣ ನನ್ನ ಪಾಲಿಗೆ ಬರುವುದಿಲ್ಲ. ದಯವಿಟ್ಟು ಯಾವ ಪಾಶವನ್ನೂ ಹಾಕಿ ನನ್ನನ್ನು ತಡೆಯಬೇಡಿ. ನಾನು ಪಂಡರಪುರಕ್ಕೆ ಹೋಗಲೇಬೇಕು. ಅದರಿಂದ ಇಲ್ಲಿ ಕಿಂಚಿತ್ತೂ ಊನವಾಗುವುದಿಲ್ಲ. ಎಷ್ಟು ಸಮಾಧಾನದಲ್ಲಿದೆಯಲ್ಲ ಎಲ್ಲ. ಇದೆಲ್ಲ ಹೀಗೇ ಇರುತ್ತದೆ ಆಯೀ ನೀವು ಸ್ವಲ್ಪ ಮನಸ್ಸು ದೊಡ್ಡದು ಮಾಡಿ. ನನ್ನ ಸ್ವಂತ ಆಯಿಗಿಂತ ನನ್ನನ್ನು ಪ್ರೀತಿಯಿಂದ ತಿಳಿದುಕೊಂಡವರು ನೀವು. ನಿಮ್ಮ ಶಬ್ದವನ್ನು ಇವರು ಎಂದೂ ಪಕ್ಕಕ್ಕೆ ಸರಿಸುವವರಲ್ಲ. ಬೇಗ ಮರಳಿ ಬರುತ್ತೇನೆ’ ಎಂದು ಸೂಕ್ಷ್ಮ ಉತ್ಕಂಠೆಯಿಂದ ಯಮುನಾ ಬಾಯಿಯನ್ನು ತಬ್ಬಿಕೊಂಡು ಬಿನ್ನವಿಸಿದಳು. ಹಸ್ತಾಕ್ಷರ ಒಳಗೆ ಹೊರಗೆ ಓಡಾಡುತ್ತಿದ್ದ. ಇದು ಹೀಗೆ ಆಗುತ್ತದೆ ಎಂಬುದು ಗೊತ್ತಿತ್ತು ಎಂಬಂತೆ ಇಲ್ಲಿನ ಸಕಲ ಸಣ್ಣ ಸರ್ವಸ್ವವೂ ನಿರ್ಲಿಪ್ತವಾದ ಮೌನದಲ್ಲಿತ್ತು. ಕೇರಿಯ ಅಕ್ಕಪಕ್ಕದ ಬಳಗದವರು ಭಜನೆ ಮಂಡಳಿಯವರು ಎಲ್ಲರೂ ಬಂದರು. ಎಲ್ಲ ಹಿರಿಯರ ಕಾಲಿಗೆ ಬಿದ್ದು ನಮಸ್ಕರಿಸಿ, ಹಸ್ತಾಕ್ಷರನನ್ನು ಮುದ್ದಿಸಿ ಚಂದಾತಾಯಿ ತಲೆ ಮೇಲೆ ಬುತ್ತಿಯ ಮೂಟೆ ಹೊತ್ತುಕೊಂಡು ಹೊರಟೇಬಿಟ್ಟಳು. ಬೀಳ್ಕೊಡಲು ಬಂದ ಹಾರ್ಮೋನಿಯಂ ಮಾಸ್ತರ್ ಪಿಂಪಳಖೋಟೆ ಅವರು ಸೇವಂತಿ ಹೂಗಳ ಮಾಲೆಯನ್ನು ಅವಳ ಕೊರಳಿಗೆ ಹಾಕಿದಾಗ ಎಲ್ಲರೂ ‘ಪುಂಡರೀಕ ವಂದೇ ಹರಿಹರಿ ವಿಠಲ್’ ಎಂದು ಜಯಕಾರ ಹಾಕಿದರು. ಮಾಲೆಯನ್ನು ತೆಗೆಯ ಹೊರಟಾಗ ಯಮುನಾಬಾಯಿ ‘ತೆಗಿಬೇಡ ಇರಲಿ’ ಎಂದಳು. ಮಾಲೆ ತೊಟ್ಟುಕೊಂಡ ಚಂದಾ ದಿಗ್ಯಾನ ಕಣ್ಣಿಗೆ ತಮ್ಮ ಮದುವೆ ದಿನದ ಅಂತಃಪಟ ಸರಿದ ಕ್ಷಣದ ಮದುವಳತಿಯಂತೆಯೇ ಕಂಡಳು. ತಡವಾಗಿ ಸುದ್ದಿ ತಿಳಿದು ಓಡಿ ಬಂದ ಕೇರಿಯ ಅಂಗನವಾಡಿಯ ಅರ್ಶಿಯಾ ಮಾಂಶಿ ‘ಎಲ್ಲರಿಗಾಗಿ ಪುಣ್ಯಾ ತಗೊಂಬಾ ಅವ್ವಾ’ ಎಂದು ತಬ್ಬಿ ಹೆಗಲಿಗೆ ಮುತ್ತಿಟ್ಟಳು. ನಸುಕಿನ ಕುಂಕುಮಾರ್ಚನೆ ಪೂರ್ವದಲ್ಲಿ ಶುರುವಾಗುವ ಕ್ಷಣಕ್ಕೇ ಭಾವಿಕ ಸಮೂಹ ಊರಿನಿಂದ ನಿರೋಪ ತೆಗೆದುಕೊಂಡು, ಅಂದರೆ ಬೀಳ್ಕೊಂಡು, ಪಂಢರಪುರದತ್ತ ತೆರಳಿತು. ಊರ ಅಗಸೆಯ ತನಕ ಎಲ್ಲ ಸಂಬಂಧಿಕರು ನಡೆದರು. ಅಲ್ಲಿ ನಿಂತು ಕೈ ಬೀಸುವಾಗ ಹಸ್ತಾಕ್ಷರನನ್ನು ಗಟ್ಟಿಯಾಗಿ ಅವಚಿ ನಿಂತಿದ್ದ ಯಮುನಾಬಾಯಿಗೆ ಅರ್ಶಿಯಾ ಮಾಂಶಿ ‘ಕಾಳಜಿ ಮಾಡಬೇಡಿ. ಸುರಳೀತ ಹೋಗಿ ಬರ್ತಾಳೆ ಚಂದಾ. ಏನೇ ಕೆಲಸಾ ಇದ್ರೂ ನನ್ನ ಕರೀರಿ’ ಎಂದು ಬೆನ್ನು ನೇವರಿಸಿದಳು.



ವಾಪಸು ಬರುವಾಗ ದಿಗ್ಯಾ ಹಸ್ತಾಕ್ಷರನನ್ನು ಬಸ್‌ಸ್ಟ್ಯಾಂಡಿನ ಕ್ಯಾಂಟೀನಿಗೆ ಕರೆದುಕೊಂಡು ಹೋಗಿ ಉಸಳ್‌ಪಾವ್ ಮತ್ತು ಗುಲಾಬ್ ಜಾಮೂನ್ ಕೊಡಿಸಿದ. ತಾನು ಜಾಮೂನು ತಿನ್ನದೆ ಹಸ್ತಾಕ್ಷರನಿಗಷ್ಟೆ ತಿನಿಸಿ ‘ಭಲೋ ಅಭ್ಯಾಸ ಮಾಡಬೇಕು ಹಂ? ಅಜ್ಜಿಗೆ ಸಹಾಯ ಮಾಡಬೇಕು’ ಎಂದ. ಅಕ್ಕಪಕ್ಕ ತಿಂಡಿ ತಿನ್ನುತ್ತಿದ್ದ ಎಸ್. ಟಿ. ಬಸ್ಸಿನ ಡ್ರೈವರು ಕಂಡಕ್ಟರುಗಳೆಲ್ಲ ಅಧಿಕಾರದಿಂದ ಉಸಳ್ ಎಕ್ಸ್‌ಟ್ರಾ ಹಾಕಿಸಿಕೊಳ್ಳುತ್ತಿದ್ದರು. ಅವರಲ್ಲೊಬ್ಬವ - ‘ನೀವು ಏನೇ ಹೇಳಿ ಮನೇಲಿ ಮಾಡುವ ಉಸಳ್ ಇಷ್ಟು ರುಚಿಕರ ಆಗುದಿಲ್ರೀ’ ಎಂದು ಹತಾಶ ದಾರ್ಶನಿಕನಂತೆ ಹಲುಬುತ್ತಿದ್ದ. ಸಾತಾರಾ, ಇಚಲಕರಂಜಿ, ಗುಲ್ಬರ್ಗಾ, ಸೋಲಾಪುರ, ಪಂಢರಪುರ-ಎಲ್ಲಾ ಕಡೆಯ ಬಸ್ಸುಗಳು ಹೊರಡುತ್ತಿದ್ದವು. ಬಸ್ಸುಗಳಿರುವುದೇ ಜನರನ್ನು ಒಂದು ಕಡೆಯಿಂದ ಇನ್ನೊಂದೆಡೆಗೆ ಒಯ್ಯುವುದಕ್ಕೆ. ಹೀಗಾಗಿ ಒಂದು ಬಗೆಯ ಬದಲಾವಣೆಯ ಹುರುಪು ನಿಲ್ದಾಣದಲ್ಲಿರುತ್ತದೆ. ಈ ಹುರುಪಿಗೂ ಎಸ್.ಟಿ. ಬಸ್ಸುಗಳ ಸರಳತೆಗೂ ನಂಟಿದೆ. ಈ ಸರಭರದ ವಹಿವಾಟನ್ನು ನೋಡುವುದರಲ್ಲಿಯೇ ಒಂದು ಸರಳ ಸುಖ ಇದೆ. ಹೀಗೆ ಎಲ್ಲ ಬಸ್ಸುಗಳನ್ನು ಬೋರ್ಡು ಸಮೇತ ಒಂದೊಂದಾಗಿ ನೋಡಿ ರೌಂಡ್ ಹಾಕಿ ಅಪ್ಪ ಮಗ ಮನೆಯ ಕಡೆಗೆ ಹೊರಟರು.

ಮೂರ್‍ನಾಲ್ಕು ವಾರಗಳು ಸರಿದು ಆಷಾಢದ ಮಳೆ ಜಬರ್‌ದಸ್ತಾಗಿ ಹುಯ್ದು ಆಷಾಢ ಏಕಾದಶಿ ದಾಟಿ ಹೋಯಿತು. ಹಸ್ತಾಕ್ಷರ ಒಂದಿಷ್ಟು ದಿನ ಆಯಿಯನ್ನು ನೆನೆಸಿಕೊಂಡು ಆಯಿ ಎಲ್ಲಿ ತಲುಪಿರಬಹುದು, ಹೇಗೆ ನಡೆಯುತ್ತಲೇ ಇರಬಹುದು ಎಂದೆಲ್ಲ ಅಜ್ಜಿಯ ಜೊತೆ ಮಾತಾಡುತ್ತಿದ್ದ. ಅಜ್ಜಿಯೂ ಸ್ವತಃ ಕಲ್ಪನೆಯಲ್ಲಿ ಚಂದಾಳ ಜೊತೆಗೆ ಪಂಢರಪುರದೆಡೆ ಸಾಗಿದ್ದಳು. ಇಲ್ಲಿಂದ ಹಾಯುವ ಮೋಡಗಳೆಲ್ಲವೂ ಆ ಕಡೆಯೇ ಹೋಗುತ್ತಿವೆ ಅನಿಸುತ್ತಿತ್ತು. ಅಥವಾ ಅವು ಅಲ್ಲಿಂದಲೇ ಬರುತ್ತಿವೆ ಅನಿಸುತ್ತಿತ್ತು. ದಿಗ್ಯಾ ಮೈ ಮೇಲೆ ಬಂದವನಂತೆ ಕೆಲಸ ಮಾಡುತ್ತಿದ್ದ. ಮಳೆಗಾಲವಾದ್ದರಿಂದ ಒಣಗಲು ಹಾಕಿದ ಉಡುಪುಗಳ ಉಸ್ತುವಾರಿ ಜತನದಿಂದ ಮಾಡಬೇಕಿತ್ತು. ಆವರಿಸಿದ ಮೋಡದ ಕತ್ತಲು ನೋಡಿಯೇ ಮಳೆ ಎಷ್ಟು ನಿಮಿಷದಲ್ಲಿ ಬಂದೀತು. ಎಷ್ಟು ಹೊತ್ತು ಹೊಯ್ದೀತು ಎಂದು ಅಂದಾಜು ಮಾಡಬೇಕಾಗಿತ್ತು. ಬಿಸಿಲು ಬಂದರೆ ಸಾಕು ಹಬ್ಬ ಎನಿಸಿ ಬಿಡುತ್ತಿತ್ತು. ಈ ನಡುವೆ, ಏಕಾದಶಿಯ ದರ್ಶನ ಮುಗಿಸಿ ತಂತಮ್ಮ ಊರೆಡೆ ಮರಳಲಾರಂಭಿಸದ ದಿಂಡಿ ಗುಂಪುಗಳು ಈ ಊರನ್ನು ದಾಟತೊಡಗಿದವು.

*(ಮುಂದುವರಿಯುವುದು)*

(ಸೌಜನ್ಯ : ಅನಾರಕಲಿಯ ಸೇಫ್ಟಿಪಿನ್)

PAGE DONATED BY : **AKADAS & FAMILY**

Invitation

# SRI GOPALAKRISHNA PRATISHTHE & BRAHMAKALASHOTSAVA
## of Sri Gopalakrishna Temple, Gokul, Sion

08th MAY 2022 - 15th MAY 2022




2nd & 1st Basement_Parking
Gr. Floor_________Temple Hall
1st Floor_________Parking
2nd Floor _________Auditorium
3rd Floor_________Two Kitchens & Dining Hall

4th Floor__AC/Non AC Hall
5th Floor__AC Hall
6th Floor__Conference Hall, Office, Kitchen
7th Floor__Guest Rooms

## SHREE GOPALAKRISHNA PRASEEDATU

As ordained by our Almighty Lord,

On the auspicious date of **Friday, 13th May 2022 @ 7.25 a.m.**, the sacred time derived from the Solar Almanac, the adorable IDOL of our beloved Sri Gopalakrishna will be consecrated with Divine Energy inside the Sanctum Sanctorum of the newly constructed Gokul temple.

On **Sunday, 15th May 2022 @ 9.50 a.m.**, one thousand and eight Silver Pots, sanctified with Vedic Hymns as per scriptural sanctions, will be offered for the Brahma Kalashabhisheka, to Propitiate the great Lord, with utmost devotion and religious fervour.

The most pious and very elaborate religious festivities starting from **Sunday, 8th May 2022 @ 7.00 a.m.** onwards to the conclusion, on **Monday, 16th May 2022**, will be conducted by the very respected Head Priest Brahma Shri Muralidhara Thanthry of Edapadavu Thenkumane and his team of specialist Vidvans and Purohiths. They will be performing every event with utmost rigor and devotion to seek benefits of Lord's grace and blessings for each participating devotee and the community at large.

The whole nine-day event of very elaborate auspicious festivities is meant for the devotees, participants, their friends, and relatives, and whole of the city.

You are most cordially invited to participate and extend your wholehearted co-operation in making this a success. Let each one of us be the proud recipient of the Abundant Grace of Lord Sri Gopalkrishna.

**A. S. Rao**
Secretary-Trustee

**Dr. Suresh S. Rao**
President

**A. P. K. Potty**
Hon. Secretary

**Trustees, GOPALAKRISHNA PUBLIC TRUST & Managing Committee, B.S.K.B. Association**

ADVT

# BRAHMAKALASHOTSAVA
## Schedule of Events

### Sunday, 08th May 2022

**7.00 am onwards**
**at Gokul**

Devatha Prarthane, Torana Muhoortha,
Ugrana Muhoortha, Acharyaadi Rutvigvahana,
Mahasankalpa, Punyaahavaachana,
Arani Mathana, Bhadradeepa Prathisthe,
Brahma Koorcha Homa, Deva Nandi,
Kankana Bandha, Ganahoma

**10.30 am onwards**
**At Ashraya-Balalaya**

Devataa Praarthane, Swasti Punyaahavaachana,
Bimbachara kalasha sahita tatvahoma, Mahapooje

**12.30 pm**
Abhijit Lagna - Bimba Chalane

**1.30 pm**
Departure to Moolalaya, Gokul

**3.00 pm**
Arrival at Hanuman Temple, Sion

**3.30 pm**
Procession in the holy presence of swamijis of Udupi Ashtha Mathas, other Mathas & dignitaries along with Horekanike

**5.10 pm**
Arrival at Gokul - Gokula Pravesha

Panchagavya melana, Saptashuddhi, Praasaada shuddhi,
Astrakalasha Prathisthe, Ankuraarpane, Rakshoghna Homa,
Vaastu Homa, Vaastu Pooje, Vaastu Bali,
Praakara Bali, Mahapooje.

**5.30 pm**
Stage Function

**H.H. Sri Sri Vidyadheesha Theertha Sripadaru,**
Palimaru Matha.
**H.H. Sri Sri Vishwaprasanna Theertha Sripadaru,**
Pejawara Matha.
**H.H. Sri Sri Vidyavallabha Theertha Sripadaru,**
Kaniyooru Matha.
**H.H. Sri Sri Ishapriya Theertha Sripadaru**
Adamaru Matha, Junior Swamiji.
**H.H. Sri Sri Sachidananda Bharati Theertha Sripadaru,**
Edaneeru Matha.
**Vedamoorthi Lakshminarayana Asranna,**
Anuvamshika Archakaru, Kateelu.
**Shri Aikala Harish Shetty, President,** World Bunts Federation.
**Shri Shashidhar Shetty, Industrialist,** Baroda.
**Shri Shashidhar Shetty, President,** Tulukoota.
**Shri Kadandale Suresh Bhandary, President,** Bhandary Maha Mandala.

### Monday, 09th May 2022

**8.00 am onwards**
Punyaahavaachana,
Saamanya shanti Praayashchitta Homas,
Sanjeevani Maha Mrutyunjaya yaga,
Bimba shuddhi prakriye,
Mahapooje

**9.00 am**
Bhajans by different bhajana mandalis

**6.00 pm onwards**
Akshate Homa, Astra Homa,
Ankura Pooje, Mahapooje

**2.00 pm**
Bhakti Rasamanjari - Vidushi Vinitha Acharya & Vidushi Vidya Tantry.

**4.00 pm**
Bhajan & Cultural Dances by Kala Jagattu, Chinnara Bimba Children, Mumbai

**5.00 pm**
Dance Fusion by Priyanjali Rao, Bharatanatyam, Harshada Jambekar, Kathak

**6.00 pm**
Stage Function
**H.H. Sri Sri Sugunendra Teertha Sripadaru, Puttige Matha.**
Guru Gaurang Das Swamiji (ISKCON).
**Dr. V. Shankar, President,** Sri Shanmukhananda Mahasabha & SIES Institutes.

**7.00 pm**
Vamshika - the dance ensemble on Gopi Geetham by Sahana School of Performing Arts, Vidushi Sahana Bharadwaj

### Tuesday, 10th May 2022

**8.00 am onwards**
Poorna Navagraha shanti,
Chandika Yaga,
Vishesha Praayashchitta Homas,
Mahapooje

**9.00 am**
Bhajans by different bhajana mandalis

**6.00 pm onwards**
Durganamaskaara Pooje,
Ankura Pooje
Mahapooje

**2.00 pm**
Bhakti Rasamanjari - Vidushi Manjula Bhat & Vidushi Chandrika Bhat.

**4.00 pm**
Karnataka Sangha, Mumbai, Kalabharati - Kannada drama, Directed by Dr.Bharat Kumar Polipu.

**5.00 pm**
'Avala Kagada' A Theatrical piece based on Rabindranath Tagore Stories,
Concept & Directed by Dr. Shripad Bhat,
Design : Shwetha Hasan,
Adaption : Shudha Adhukal.
Presantation Ahalya Ballal

**6.00 pm**
Stage Function
**Mahuli Vidwan Vidyasimha Acharya,**
Sri Satyadhyana Vidyapeetha, Mulund,
Karnataka Rajyotsava Prashasti Puraskrutaru.
**Shri Kalladka Prabhakar Bhat,** Convener, Sri Rama Vidya Kendra Trust.
**Dr. Smt. Usha Chadaga,** Ph.D. (Sanskrit)

**7.00 pm**
Yahshagana :
"Krishna Leele - Kamsa Vadhe" by Gokul Members,
Direction : Geetha L. Bhat

### Wednesday, 11th May 2022

**8.00 am onwards**
Swasthi Punyaahavaachana,
Ashthaakshara Homa,
Krishna Mantra Homa,
Shanti Praayashchitta Homas,
Mahapooje.

**9.00 am**
Bhajans by different bhajana mandalis

**6.00 pm onwards**
Naga tanutarpana, Prasanna Pooje,
Mahapooje

**2.00 pm**
Bhakti Rasamanjari - Vidushi Nalini Rao, Vidushi Veena Rao (Veena recital)

**5.00 pm**
Singing orchestra by Amruta Natu, Gaurav Bangia

**7.00 pm**
"Sri Ranganatha"
The reclining Lord by Vidwan Pavitra Bhat & disciples.

**4.00 pm**
Kannada Drama "Saakaara" By Mysore Association Kalatanda Matunga.
Directed by Dr. Manjunath

**6.00 pm**
Stage Function
**Padmashree Dr. S.L.Bhyrappa,**
Saraswati Sanmana Puraskruta Novelist.
**Dr.Vyasarao Ninjoor,**
Mumbai Sahiti.
**Smt. Mitra Venkatraj,**
Mumbai Sahiti.
**Shri Pradeep Kumar Kalkura,**
President, Kalkura Pratishtana,
(Ex- President, Kannada Sahitya Parishattu).

ADVT

# BRAHMAKALASHOTSAVA
## Schedule of Events

### Thursday, 12th May 2022

**Ekadashi**

**8.30 am onwards**
Srikrishna Moolamantra Japa

**9.00 am**
Bhajans by different bhajana mandalis

**6.00 pm onwards**
Shakti Homa,
Ratnanyasaadi Homas,
Chakraabhja Mandala Pooje,
Gopooje, Godohana,
Shirastatva Homa,
Adhivasa Homas

**2.00 pm**
Srinivasa Kalyana, Dance Ballet by
Radhakrishna Nritya Academy,
Mira Road,
Guru Vidushi Sukanya Bhat

**3.30 pm**
"Gokulaananda Govinda"
'Yaksha-Geeta-Nrutya Nataka'
by Kala Jagattu, Mumbai,
A Concept of
Karnataka Rajyotsava Prashasti Puraskruta
Dr. Tonse Vijayakumar Shetty.

**5.00 pm**
'Go Kool' Band

**6.00 pm**
Stage Function
Justice **B. N. Srikrishna.**
Sangeeta Vidyanidhi **Dr. Vidyabhushan.**
**Dr. Smt. Sunita Shetty,**
Hiriya Sahiti,
Karnataka Rajyotsava Prashasti Puraskrutaru.
**Shri Chandrashekhara Palettadi,**
Editor, Karnataka Malla,
Karnataka Rajyotsava Prashasti Puraskrutaru.

**7.00 pm**
Sangeeta Vidyanidhi
Dr. Vidyabhushan

### Friday, 13th May 2022

**5.30 am onwards**
Swasti Punyaahavaachana, Ashthamangala Darshana,
Vidweshaadi Kalashabhisheka

**7.25 am** (Vrushabha Lagna)
Sri Gopalakrishna Bimba Pratishthe, in the Holy Presence of
Vedamoorthy Vasudeva Asranna Anuvamhika Archakaru, Kateelu

**9.00 am**
Bhajans by different bhajana mandalis

**6.00 pm onwards**
Maha Sudarshana Homa, Mantapa Samskara Prakriye,
Mahapooje

**2.00 pm**
Dance Drama, Krishnam Vande Jagadgurum, by
Nritya Vidya Nilaya, Bhandup,
Guru Vidushi Shailaja Madhusoodan

**5.00 pm - 8.00 pm**
Srinivasa Kalyanotsava

### Saturday, 14th May 2022

**8.00 am onwards**
Punyaahavaachana, Pavamana Homa,
Praayashchitta Homas, Tatva Homa,
Tatva Kalashabhisheka, Mahapooje

**9.00 am**
Bhajans by different bhajana mandalis

**6.00 pm onwards**
Mandala Pooje,
Pancha Vimshathi dravyamelita sahasra
parikalasha sahita Brahma kalashadhivaasa,
Adhivaasa Homa,
Ankura Pooje, Mahapooje.

**2.00 pm**
**"Devi Mahatme"** Kateelu Mela

**5.00 pm - 6.00 pm**
Stage Function
**Shri Krishna L Bangera,**
President, Mogaveera Vyavasthapaka Mandali.
**Shri Chandrahas Shetty,** President, Bunts Sangha.
**Shri Harish G.Amin,**
President, Billavara Association.
**Shri Sateesh Ram Naik,** GSB seva Mandal, Mumbai.
**Shri Ravi S.Devadiga,**
President, Devadiga Sangha.
**Shri R. M.Bhandary,** Bhandary Seva Samiti.
**Shri Sadananda Acharya,**
President, Karnataka Vishwakarma Association, Mumbai.

### Sunday, 15th May 2022

**7.00 am onwards**
Punyaahavaachana, Ganayaga

**9.50 am (Mithuna Lagna)**
Sahasra kalasha sahita (1008)
Brahmakalashabhisheka.
Mahapooje, Palla Pooje

**12.00 noon**
Tulabhara Seva to
H.H. Sri Sri Vidyadheesha Teertha Swamiji of
Palimaru Matha alongwith his Pattada Devaru,
Kodandarama

Anna Santharpane

**5.00 pm onwards**
Shadadvanyasa Pooje, Ranga Pooje,
Devara Bali Mahotsava

**9.30 am**
Bhakti Rasamanjari
by Yuva Kalavrunda

**12.45 pm - 02.15 pm**
Smt. Susheela Acharya Family

**02.30 pm - 04.00 pm**
Dasaru Kanda Krishna
by Dr.Shyamala Prakash.

**11.00 am**
Bhakti Rasamanjari
by Vidwan Pavan Rao


**5.00 pm**
**At Shanmukhanand Hall**
**"Krishna"** Ballet by **Sonia Parchure,**
a celebrated dancer and choreographer

**6.00 pm**
Stage Function

**7.30 pm**
Ultimate melodies of Madan Mohan
Music coordinator : Avinash Chandrachud
with a live orchestra of 25 musicians.
Singers : Hrishikesh Ranade, Anand Sawant,
Sonali Karnik, Advaita Lonkar - Pethe & Sharayu Date
Compere : Ambarish Mishra.

ADVT

Gopalakrishna Temple is adorned by 44 Keshavadi Krishnashila Devata statues, an ornamental Teertha mantapa made of ash stone, and a hall ceiling decorated with wooden carvings of Lord Krishna depicted in His various avatars. Dashavatara idols of Lord Vishnu in gold and silver plating decorate the temple hall. Artistically sculptured beautiful idols of different deities embellish the walls of the garbha gudi of the temple, enhancing the ambience of the temple as a place of devotion.



We pray to Lord Krishna to bestow upon you and your family good health, wealth, prosperity and peace.
Looking forward to your active participation along with a generous contribution.

**Bank Details : The BSKB Association**

**For Indian Rupees from Indian Nationals only**

**Beneficiary** : The BSKB Association
**Bank** : Karnataka Bank Ltd.
**Branch** : Sion (E)
**Account type** : Savings
**Account No.** : 0852500100012501
**IFSC** : KARB0000085

**Write to secretary@bskba.com with UTR number**

The BSKB Association
SCAN QR CODE TO DONATE

GOPALAKRISHNA PUBLIC TRUST
**Regd. No. E25308 (Mumbai)**

B. S. K. B. ASSOCIATION
**Regd. No. F 635 (BOM)**

**"Gokul"**, Gokul Marg, Plot No. 273, Sion (E), Mumbai - 400 022.
**Tel. :** +91 8591732651 **E-mail :** secretary@bskba.com

"Ashraya", Plot No. 92, Sector 19, Nerul (E), Navi Mumbai - 400 706.
**Tel. :** 2770 0805 **E-mail :** ashraya@bskba.com

**Website : www.bskba.com • www.gokulprojects.com**

ADVT

# Inclusive Growth in India : Disappointing Experiences Looming Large

✍ **Dr. G. V. Joshi,** **Former Professor and Chairman**
**Dept. of Economics, Mangalore University**

*(Continued from last issue)*

Rangarajan also thought that inclusive growth should support all sections of the society though he did not forget the significance of equity ( Rangarajan, 2008). In his special lecture delivered in Mangalore University on August 10, 2007, he identified five stages of economic growth. In the first stage, growth was identified with the increase in the availability of material goods and services and was to be achieved through capital formation. In the second stage, there was greater concern with the equitable distribution of income. In the third stage the concept of equity was interpreted to mean the provision to every one of what came to be described as "basic needs" such as food, education, safe drinking water and health services. The fourth stage was the emergence of the concept of 'sustainable development' focusing attention on balancing today's concerns with tomorrow's requirements. In the fifth stage there is much greater concern for inclusive growth which should cover all strata of society. Rangarajan states that emphasis is given to "financial inclusion" in the last stage as a route to inclusive growth. It is now subsumed in Jan Dhan Yojana which the Modi Government seeks to execute with negligible thrust in reality on inclusive growth.

With the bad demise of the 11th Plan began the sad song of Twelfth Plan (2012-2017) targeting an average annual growth rate of 9 per cent. The objective of the Plan was to achieve faster, sustainable and more inclusive growth. The main drivers of growth indicated were : sound macro-economic fundamentals, impact of economic reforms, dynamism of the private sector, demographic dividends and improvement in productivity (Shetty, 2012). After 2017 there was no economic planning to stress the significance of inclusive growth . The Modi Government has scant regard for the task of making growth process inclusive even in the interest of the sections of the society tortured by Covid-19. The country by now has no growth drive. It has only vaccination drive!

Two important requirements of inclusive growth are decentralization of powers and skill development on a large scale to jack up employability. The Economic Survey for 2017-18, while admitting that the 73rd and 74th Amendments to the Constitution were watershed developments in the country's federal structure for achieving decentralization of powers essential for inclusive growth, asserted that it is necessary to evaluate their performance. This assertion is more than enough to disclose that the central purpose of these Amendments is yet to be fulfilled. Hardly any Panchayat keeps information on soil fertility, existing irrigation facilities and possible ways of creating more weather profile, mineral resources, prospects of new industries or even of cottage industries for its own area (Sarkar, 2007). It would not be a surprise if inclusive growth in many villages has remained even today a non-starter.



One of the flagship programmes covering Panchayats also introduced in UPA regime is the Mahatma Gandhi National Rural Employment Guarantee Scheme or Act (MGNREGA). Arun Jetli caused pleasant surprise to the opposition parties by maintaining with admirable clarity that MGNREGA would be substantially linked to agriculture and allied sectors. Though much progress was not registered in this direction Jetli's budgetary operations were indicating its role in facilitating inclusive growth. But unforunately his successor Nirmala Sitaraman in her budgets did not recognise the significance of MGNREGA . It became at once clear after beginning of the first wave of Corona( see the editorial note of Deccan Herald , November 11,2021). The effort of Karnataka in linking MGNREGA to agriculture did not get the success it deserved. Ultimately only dry land cultivation for growing paddy came within the purview of MGNREGA when Siddaramaiah was the Chief Minister . It is not anything more than lip service.

A study in Maharashtra that got wide publicity in 2015 found that MGNREGA could provide works supporting agriculture. These works helped a large number of small and marginal farmers. Over all, the study including many agricultural operations and assets such as contour trenching, earthen and stone bunds, farm ponds, compartment bunding, land development etc) disproved the widespread perception that MGNREGA did not create anything productive ( Ranware et al 2015). The accomplishments of Maharashtra serve as a model for other states if they are seriously and sincerely intended to attain inclusive growth in rural areas by providing employment.

*(To be continued...)*

*Courtesy : Invited article published in Al-Shodhana, a peer reviewed Journal of St. Alosius College, Autonomous, Mangalore, Vol. 9 No 2, July 2021, Pg. No. 14*

*PAGE DONATED BY :* ***SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

# ಜೀವಸ್ವರ

✍ ಡಾ. ಜಿ.ಎನ್. ಉಪಾಧ್ಯ

**ಜಯಂತ ಕಾಯ್ಕಿಣಿ ಪ್ರಬಂಧ ಲೋಕ**


ಕಲಾ ಭಾಗ್ವತ್ (9930762312)

ಪ್ರಕಾಶನ : ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ

ಪುಟಗಳು : 214

ವರ್ಷ : 2021

ಬೆಲೆ ರೂ. : 200/-




'ಜೀವಸ್ವರ' ಇದು ಕಲಾ ಭಾಗ್ವತ್ ಅವರ ಇತ್ತೀಚಿನ ಕೃತಿ. ಈ ಕೃತಿಯನ್ನು ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗ ಪ್ರಕಟಿಸಿದೆ. ಸಾಂಪ್ರತ ಕನ್ನಡದ ಉತ್ಕೃಷ್ಟ ಲೇಖಕ, ಸಾಹಿತಿಗಳಲ್ಲಿ ಜಯಂತ ಕಾಯ್ಕಿಣಿ ಅವರದು ಎದ್ದು ಕಾಣುವ ಹೆಸರು. ಅವರದು ವರ್ಣರಂಜಿತ ವ್ಯಕ್ತಿತ್ವ. ಸಾಹಿತ್ಯ, ಸಿನಿಮಾ, ರಂಗಭೂಮಿ, ಚಿತ್ರಕಲೆ, ಪತ್ರಿಕೋದ್ಯಮ, ಸಂಗೀತ, ಭಾಷಾಂತರ ಹೀಗೆ ಅವರ ಸೃಜನಶೀಲತೆ ನಾನಾ ತೆರದಲ್ಲಿ ಪ್ರಕಟವಾಗಿದೆ. ಜಯಂತರ ಪ್ರತಿಭೆಯ ಕಾರ್ಯ ಬೆರಗು ಹುಟ್ಟಿಸುತ್ತದೆ. ಆಧುನಿಕ ಕನ್ನಡ ವಾಙ್ಮಯಕ್ಕೆ ತಮ್ಮ ಸ್ವೋಪಜ್ಞತೆಯಿಂದ ನೂತನ ಆಯಾಮ ನೀಡಿದ ಕೀರ್ತಿಗೂ ಅವರು ಭಾಜನರಾಗಿದ್ದಾರೆ. ಅವರು ಸ್ಫೂರ್ತಿಯ ಚಿಲುಮೆ. ಅವರಿದ್ದಲ್ಲಿ ಉಮೇದು, ಉತ್ಸಾಹ, ನಗೆಯಲೆ ಖಂಡಿತ. ಕನ್ನಡದ ಕೀರ್ತಿಯನ್ನು ಬಾನೆತ್ತರಕ್ಕೇರಿಸಿದ ಜಯಂತರ ಬರವಣಿಗೆ ಸಹೃದಯರಿಗೆ ಬಲು ಆಪ್ಯಾಯಮಾನ. ಕನ್ನಡ ಗದ್ಯ ಸಾಹಿತ್ಯಕ್ಕೆ ಜಯಂತ ಕಾಯ್ಕಿಣಿ ಅವರಿಂದ ನೂತನ ಆಯಾಮ ಸಿಕ್ಕಿದೆ ಎಂಬುದು ಅಭಿಮಾನದ ಸಂಗತಿ.

ಜಯಂತರ ಗದ್ಯ ಬರವಣಿಗೆ ಸದ್ದಿಲ್ಲದೆ ಸದಭಿರುಚಿಯ ನಿರ್ಮಾಣದ ಕೆಲಸವನ್ನು ಮಾಡುತ್ತಾ ಸಾಗುತ್ತದೆ. ಅವರದು ಮೂಲಭೂತವಾಗಿ ಮಾನವೀಯ ಕಾಳಜಿ, ಅವರ ಪ್ರಬಂಧಗಳಲ್ಲಿ ಪುಟಿಯುವ ಜೀವನ ಪ್ರೀತಿ, ಅದಮ್ಯ ಆಶಾವಾದ, ಶಬ್ದ ಚಿತ್ರಗಳ ಬೆರಗು, ಕಾವ್ಯಾತ್ಮಕ ತೀವ್ರತೆ, ಬದುಕಿನ ಕುರಿತ ಆರೋಗ್ಯಕರ ಉತ್ಸಾಹಿ ದೃಷ್ಟಿಕೋನ ಹೀಗೆ ಜಯಂತರ ಪ್ರಬಂಧ ಪ್ರಪಂಚದ ಅತಿಶಯತೆ, ಅನನ್ಯತೆಗಳನ್ನು ಬೆಳಕಿಗೆ ಹಿಡಿಯುವಲ್ಲಿ ಕಲಾ ಭಾಗ್ವತ್ ಅವರು ಇಲ್ಲಿ ಯಶಸ್ವಿಯಾಗಿದ್ದಾರೆ. ಇದು ಗದ್ಯ, ಇದು ಪದ್ಯ ಎಂದು ಬೇರ್ಪಡಿಸಲಾಗದ ಜಯಂತರ ಪ್ರಬಂಧಲೋಕದ ಹಿರಿಮೆ ಹೆಚ್ಚುಗಾರಿಕೆಯನ್ನು ವಿಭಿನ್ನ ನೆಲೆಗಳಲ್ಲಿ ವಿಂಗಡಿಸಿ ವಿಶ್ಲೇಷಿಸಿರುವ ಪರಿ ಇಲ್ಲಿ ಮನಂಬುಗುವಂತಿದೆ. ಕನ್ನಡ ಪ್ರಬಂಧಕಾರರಲ್ಲಿ ಜಯಂತ ಕಾಯ್ಕಿಣಿ ಅವರದು ಭಿನ್ನ ಧ್ವನಿ ಎಂಬುದನ್ನು ಕಲಾ ಭಾಗ್ವತ್ ಅವರು ಈ ಕೃತಿಯಲ್ಲಿ ಸಾಧಾರವಾಗಿ ತೋರಿಸಿಕೊಟ್ಟಿದ್ದಾರೆ. ಜಯಂತರ ಗದ್ಯದ ಗಟ್ಟಿತನ, ಸುಲಲಿತ ಲಯಗಾರಿಕೆ, ಸಂವಾದಗುಣ, ಆತ್ಮೀಯ ಮಾತಿನ ದಾಟಿಯಲ್ಲಿ ಸಾಗುವ ಲಲಿತ ಮನೋಹರ ಶೈಲಿಯ ಮೇಲೂ ಇಲ್ಲಿ ಬೆಳಕು ಹಾಯಿಸಲಾಗಿದೆ. ನಾವು ಬದುಕಿನ ಜಂಜಡದಲ್ಲಿ ಕಳೆದುಕೊಳ್ಳುತ್ತಿರುವ ಮುಗ್ಧತೆ, ರಸಿಕತೆ, ಸೋರಿ ಹೋಗುತ್ತಿರುವ ಸಾಂಸ್ಕೃತಿಕ ಮೌಲ್ಯಗಳನ್ನು ಸಲೀಸಾಗಿ ನಮ್ಮ ಕಣ್ಣೆದುರು ತಂದು ನಿಲ್ಲಿಸುವ ಜಾಣ್ಮೆ.. ಹೀಗೆ ಜಯಂತರ ಗದ್ಯ ಸಾಹಿತ್ಯದ ಆಳ, ಅಗಲ, ವೈಭವ ಇಲ್ಲಿ ಅನಾವರಣಗೊಂಡಿದೆ. ಜಯಂತರ ಪ್ರಬಂಧ ಸಾಹಿತ್ಯದ ಹಿರಿಮೆ ಗರಿಮೆಯನ್ನು ತೂಗಿನೋಡಿ ಬೆಲೆಕಟ್ಟುವ ಕಾರ್ಯ ಈ ಕೃತಿಯಲ್ಲಿ ಕಲಾ ಭಾಗ್ವತ್ ಅವರು ಯಶಸ್ವಿಯಾಗಿ ಮಾಡಿದ್ದಾರೆ.

ಜಯಂತ ಕಾಯ್ಕಿಣಿ ಅವರ ಪ್ರಬಂಧ ಪ್ರಪಂಚದ ಮೇಲೆ ಹೊಸ ಬೆಳಕು ಹಾಯಿಸಿರುವುದು ಈ ಕೃತಿಯ ಅತಿಶಯತೆ. ಇಂಗ್ಲಿಷ್ ವಿಮರ್ಶಕ ಕ್ರೋಚೆ 'ಭಾಷೆಯೆಲ್ಲ ಕವಿತೆ' ಎಂದಿದ್ದಾನೆ. ಭಾಷೆ ಕವಿತೆಯೋ, ಕತೆಯೋ, ಪ್ರಬಂಧವೋ ಆಗುವುದು ಸಾಮಾನ್ಯದ ಮಾತಲ್ಲ. ಜಯಂತ ಕಾಯ್ಕಿಣಿ ಅವರು ಕನ್ನಡದ ಪ್ರಮುಖ ಪ್ರಬಂಧಕಾರರಲ್ಲಿ ಒಬ್ಬರು. ಪ್ರಬಂಧಗಳ ಜೀವ ಜೀವಾಳವಾದ ಮನೋವಿಲಾಸ, ಸ್ವಚ್ಛಂದ ಭಾವ ಲಹರಿ ವಿಷಯದ ಆಯ್ಕೆ, ನಿರೂಪಣೆಯಲ್ಲಿ ಮುಕ್ತ ಮನೋಧರ್ಮ ಅವರ ಬರವಣಿಗೆಯಲ್ಲಿ ಒಡೆದು ಕಾಣುತ್ತದೆ. ಅವರ ಪ್ರಬಂಧಗಳು ವಾಸ್ತವದ ನೆಲೆಯಿಂದ ಕಾವ್ಯದ ಲಯಕ್ಕೆ ನಾಟಕೀಯವಾಗಿ ಧಾವಿಸಿ ಹೋಗುತ್ತವೆ. ತಮ್ಮ ಲಲಿತ ಮನೋಹರ ಶೈಲಿ, ನವಿರಾದ ಹಾಸ್ಯ, ಮಾತಿನ ಚಪ್ಪರ, ವಿಚಾರದಲ್ಲಿ ನಾವೀನ್ಯ ಪ್ರಬಂಧ ಧ್ವನಿ ಮೊದಲಾದ ಗುಣಗಳಿಂದ ಕನ್ನಡ ಪ್ರಬಂಧ ಸಾಹಿತ್ಯದ ಬಿಗುವಿನ ಬಂಧವನ್ನು ತಿಳಿಗೊಳಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ ಎಂಬುದನ್ನು ವಿಭಿನ್ನ ನೆಲೆಗಳಲ್ಲಿ ಚರ್ಚಿಸಿರುವುದು ಗಮನೀಯ ಅಂಶ. ಪರಂಪರೆಯ ಅರಿವಿನೊಂದಿಗೆ ಪ್ರಬಂಧದ ಗಡಿರೇಖೆಯನ್ನು ಮುರಿದು ವಿಶಿಷ್ಟವಾದ ರೀತಿಯಲ್ಲಿ ಕಾಯ್ಕಿಣಿ ಅವರ ಗದ್ಯ ಬರಹಗಳು ಮೂಡಿಬಂದಿವೆ. ಜಯಂತರು ಸಣ್ಣಕತೆ, ಕಾವ್ಯ, ನಾಟಕ, ಸಿನಿಮಾ ಗೀತೆ ಮುಂತಾದ ಪ್ರಕಾರಗಳಲ್ಲಿ ಸಮೃದ್ಧವಾಗಿ ಕೃಷಿ ಮಾಡಿದವರು. ಜಯಂತರು ಕನ್ನಡದ ಇತರ ಪ್ರಬಂಧಕಾರರ ದಾರಿಯಲ್ಲಿ ನಡೆದವರಲ್ಲ ಎಂಬುದನ್ನು ಎಳೆ ಎಳೆಯಾಗಿ ವಿಶ್ಲೇಷಿಸಿರುವುದು ಈ ಕೃತಿಯ ಹೆಚ್ಚುಗಾರಿಕೆ. ಜಯಂತ ಅವರ ಗದ್ಯ ಸರಳ ಸುಂದರ ಚಿತ್ತಾಪಹಾರಿ. ಅವರು ಸಿನಿಮಾ ಸಂಗೀತ ಕಲಾವಿದರ ಕುರಿತು ಬರೆದ ಪ್ರಬಂಧಗಳು ಸಾಂಸ್ಕೃತಿಕ ದಾಖಲೆಗಳೇ ಆಗಿವೆ.

ಜಯಂತರ ಬರವಣಿಗೆಯಲ್ಲಿ ಒಂದು ಬಗೆಯ ವಿಶಿಷ್ಟವಾದ ಲಯವಿದೆ. 'ಮಾತು ಮಾತು ಮಥಿಸಿ ಬಂದ ನಾದದ ನವನೀತ' ಎಂಬ ಬೇಂದ್ರೆಯವರ ಮಾತು ಇಲ್ಲಿ ನಿಜವಾಗಿ ಎದ್ದು ಕಾಣುತ್ತದೆ. ಅವರ ಗದ್ಯ ಕಾವ್ಯದ ಸಾಮರ್ಥ್ಯವನ್ನು ಪಡೆದಿದೆ. ಅವರ ಭಾಷೆಯೇ ಕವಿತೆ. ಜಯಂತರ ಗದ್ಯ ಸಾಹಿತ್ಯದಲ್ಲಿ ವಿಶಿಷ್ಟ ಸೃಜನಶೀಲತೆ ಇದೆ. ಸಾಮಾನ್ಯ ವಿಷಯವನ್ನು ಅಸಾಮಾನ್ಯ ಮಾಡುವ ಕಲೆಯಿದೆ. ಸೂಕ್ಷ್ಮ ಕಣ್ಣುಗಳಿಂದ ಜಗತ್ತನ್ನು ಕಾಣಿಸಿ ನಮ್ಮ ಮನಸ್ಸಿಗೆ ನಾಟುವಂತೆ, ಹೃದಯಕ್ಕೆ ತಟ್ಟುವಂತೆ ಮಾಡಿ ಅನುಭವಕ್ಕೆ ತರುತ್ತಾರೆ. ವಿಜ್ಞಾನದ ಚಕ್ಷುಗಳಿಂದ ಜಗತ್ತನ್ನು ಮುಕ್ತಮನಸ್ಸಿನಿಂದ ನೋಡಿ ಕಂಡಿರುವುದನ್ನು ಅಷ್ಟೇ ಸೂಕ್ಷ್ಮವಾಗಿ ಕಟ್ಟಿಕೊಡುತ್ತಾರೆ. ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ, ಕೊಂಕಣಿ ಹೀಗೆ ಬಹುಭಾಷಿಕ ಸಂವೇದನೆಗಳನ್ನು ಹೊಂದಿರುವ ಜಯಂತರು ಎಲ್ಲ ಭಾಷಿಕರನ್ನು ಕನ್ನಡಕ್ಕೆ ಬರಹಗಳ ಮೂಲಕ ಕರೆತರುತ್ತಾರೆ. ಲೀಲಾಜಾಲವಾಗಿ ಮುರಿದು ಕಟ್ಟುವ ನೈಪುಣ್ಯ ಕಲೆಗಾರಿಕೆ ಜಯಂತರಿಗೆ ಸಿದ್ಧಿಸಿದೆ. ಅವರ ಸಾಹಿತ್ಯ ನಿಜದ ಬದುಕಿನ ಒಳಗೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಅಂಚಿನಲ್ಲಿರುವ ವಿಷಯಗಳ ಕಡೆ ಅವರ ಅಕ್ಷರಗಳು ನಮ್ಮ ಲಕ್ಷ್ಯವನ್ನು ಸೆಳೆದು ತೋರ್ಪಡಿಸಿ ತಿಳಿ ಹೇಳುತ್ತವೆ. ಮುಕ್ತ ಹಾಗೂ ವಿಶಾಲವಾದ ಚಿಂತನೆ, ಯೋಚನೆ, ವಿಚಾರ ಲಹರಿಯೊಂದಿಗೆ ತಟ್ಟುವ ತಂಗಾಳಿ ಜಯಂತರ ಗದ್ಯ ಸಾಹಿತ್ಯ. ತಮ್ಮ ಗದ್ಯ ಬರಹಗಳ ಮೂಲಕ ಭವಿಷ್ಯತ್ತಿನ ಬದುಕಿನ ಹಾದಿಯನ್ನು ತೋರಿಸುತ್ತ ಕೃತ್ರಿಮತೆಗೆ ತೆರೆ ಎಳೆಯುವ ಅವರ ಬರಹಗಳ ಸಾಲುಗಳು ನಮ್ಮನ್ನು

ಗುರುತಿಲ್ಲದ ಪ್ರಪಂಚಕ್ಕೆ ತೆರವುಗೊಳಿಸುತ್ತದೆ. ‘ಪನ್ನೀರಿನಲ್ಲಿ ಅದ್ದಿದ ಬಟ್ಟೆಯನ್ನು ಬಿಸಿಲಿನಲ್ಲಿ ಹರವಿ ಒಣಗಿಸಿದ ಮೇಲೂ ತುಸು ಸುವಾಸನೆ ಅಂಟಿ ಕೊಂಡಿರುತ್ತದೆ’. ಎಂಬ ಟಿ. ಎಸ್. ವೆಂಕಣ್ಣಯ್ಯನವರು ಹೇಳುವ ಮಾತು ಜಯಂತರ ಬರಹದ ಶೈಲಿಗೆ ಅಕ್ಷರಶಃ ಅನ್ವಯಿಸುವುದು.

ಹತ್ತು ಅಧ್ಯಾಯ ಹಾಗೂ ಅನೇಕ ಉಪ ಅಧ್ಯಾಯಗಳಲ್ಲಿ ಕನ್ನಡ ಗದ್ಯ ಇಟ್ಟ ಹೆಜ್ಜೆ ಅದು ತೊಟ್ಟ ರೂಪವನ್ನು ಗುರುತಿಸುವುದರ ಜತೆ ಜತೆಗೆ ಕನ್ನಡ ಪ್ರಬಂಧ ಸಾಹಿತ್ಯದ ಹೆಜ್ಜೆ ಹಾದಿ, ಅಲ್ಲಿ ಜಯಂತ ಕಾಯ್ಕಿಣಿ ಅವರು ಸಾಧಿಸಿದ ಮೇಲುಗೈಯನ್ನು ಮುನ್ನೆಲೆಗೆ ತಂದು ಚರ್ಚಿಸಿರುವುದು ಈ ಕೃತಿಯ ಧನಾತ್ಮಕ ಅಂಶ. ಬದುಕಿನೊಂದಿಗೆ ಮೂಡಿಬಂದ ಬರಹ ಎಂಬ ಅಧ್ಯಾಯದಲ್ಲಿ ಜಯಂತರ ಜೀವನ ಯಾನ, ಯಶೋಗಾಥೆ ಪರಿಣಾಮಕಾರಿಯಾಗಿ ದಾಖಲಾಗಿದೆ. “ಜಯಂತ ಕಾಯ್ಕಿಣಿ ಅವರ ಗದ್ಯ ಶೈಲಿ ಮನಸ್ಸನ್ನು ಸೆಳೆಯುವಂತದ್ದು. ವಿಶಿಷ್ಟ ರೀತಿಯಲ್ಲಿ ತಳಪಾಯ ಹಾಕಿ ಸರಳ ಸಂಗತಿಗಳನ್ನು ಮನಮುಟ್ಟುವಂತೆ ಬರೆಯುವ ನಿಪುಣತೆ ಇವರ ಹಲವು ಲೇಖನಗಳಲ್ಲಿ ಬಹುಮುಖ್ಯ ಅಂಶ. ಜೊತೆಗೆ ರೂಪಕ, ಅಲಂಕಾರ, ಉಪಮೆ ಪ್ರತಿ ಪುಟದಲ್ಲೂ ಹೇರಳವಾಗಿವೆ. ಜಯಂತ್ ಕಾಯ್ಕಿಣಿಯವರು ಸಾಹಿತ್ಯ ವಲಯದಲ್ಲಿ ಹೆಚ್ಚು ಆಪ್ತರೆನಿಸುವುದು ಬರಹಗಳ ಸಂಖ್ಯಾ ಬಾಹುಳ್ಯದಿಂದಲ್ಲ. ಬದಲಾಗಿ ಅವುಗಳ ಗುಣ ಬಾಹುಳ್ಯದಿಂದ. ಯಾವ ಪೂರ್ವಾಗ್ರಹ ತತ್ವ ಆದರ್ಶಗಳಿಗೆ ಕಟ್ಟು ಬೀಳದೆ ತನ್ನದೇ ಆದ ಸ್ವೋಪಜ್ಞತೆಯಿಂದ ಅವರ ಲೇಖನಿ ಕಾರ್ಯನಿರ್ವಹಿಸುತ್ತದೆ. ‘ಶಬ್ದತೀರ’ ಎನ್ನುವುದು ಅವರ ಬದುಕಿನ ಅದ್ಭುತ ರಮ್ಯ ಕ್ಷಣಗಳ, ಒಳಗನ್ನು ಅರುಹುವ ಮಜಲುಗಳ, ಮನುಷ್ಯನ ಸಹಜ ಪ್ರವೃತ್ತಿಗಳ ಕಪ್ಪು ಬಿಳುಪಿನ ಚಿತ್ರ. ಅನುಭವದ ಅನುಭೂತಿಯಾದಾಗಿನ ಸ್ವಗತ. ಮಗುವಿನ ಮುಗ್ಧತೆ, ಸಹಜ ಕೌತುಕತೆಯ ಹಿನ್ನೆಲೆಯಲ್ಲಿ ಬೆಳಗಿದ ಒಳನೋಟಗಳು. ಅವರೇ ಹೇಳುವಂತೆ ಅವರಿಗೆ ಅವರ ಕಣ್ಣುಗಳೇ ತೋರಿದ ಮಾನವ ಲೋಕದ ವಿಸ್ಮಯಗಳು” ಎಂಬುದನ್ನು ಈ ಕೃತಿಯಲ್ಲಿ ಕಲಾ ಭಾಗ್ವತ್ ಅವರು ಸಶಕ್ತವಾಗಿ ತೋರಿಸಿಕೊಟ್ಟಿದ್ದಾರೆ. ಕಲಾ ಭಾಗ್ವತ್ ಅವರ ಪ್ರತಿಭೆ, ಸೂಕ್ಷ್ಮ ಚಿಂತನಕ್ರಮ, ನಿರೂಪಣಾ ಶೈಲಿಯಿಂದ ಈ ಕೃತಿ ಬಹು ಹೃದ್ಯವಾಗಿ ಪಡಿಮೂಡಿದೆ.

“ಪ್ರಸ್ತುತ ಕೃತಿ ಇತ್ತೀಚಿನ ಮುಂಬೈನ ಒಂದು ಮಹತ್ತರ ಕೊಡುಗೆ. ಈ ಮೂಲಕ ಕಲಾ ಭಾಗ್ವತ್ ಅವರು ಪ್ರಬಂಧ ಪ್ರಕಾರದ ಅಧ್ಯಯನಕ್ಕೆ ಬಹಳ ಒಳ್ಳೆಯ ಪರಾಮರ್ಶನ ಗ್ರಂಥವೊಂದನ್ನು ಸಿದ್ಧಪಡಿಸಿ ಕೊಟ್ಟಿದ್ದಾರೆ. ಈ ಕೃತಿಯಲ್ಲಿ ಜಯಂತ ಕಾಯ್ಕಿಣಿಯವರ ಲಲಿತ ಪ್ರಬಂಧಗಳು ಹಾಗೂ ಅಂಕಣ ಬರಹಗಳ ಕುರಿತು ಮಾತ್ರವಲ್ಲ ಪ್ರಬಂಧ ಎಂಬ ಸಾಹಿತ್ಯ ಪ್ರಕಾರದ ಇತಿಹಾಸ ಮತ್ತು ಕನ್ನಡದಲ್ಲಿ ಅದು ಬೆಳೆದ ಬಗೆಯ ಐತಿಹಾಸಿಕ ವಿವೇಚನೆಯಿದೆ. ಕನ್ನಡದಲ್ಲಿ ಪ್ರಬಂಧ ಸಾಹಿತ್ಯದ ಅಧ್ಯಯನ ಮಾಡುವವರು ಅಗತ್ಯವಾಗಿ ಗಮನಿಸ ಬೇಕಾದ ಪರಾಮರ್ಶನ ಕೃತಿಯಾಗಿದೆ” ಎಂಬುದಾಗಿ ಈ ಕೃತಿಯ ಮುನ್ನುಡಿಯಲ್ಲಿ ಡಾ. ಜನಾರ್ದನ ಭಟ್ ಅವರು ಹೇಳಿರುವ ಮಾತಿನಲ್ಲಿ ಉತ್ಪ್ರೇಕ್ಷೆಯಿಲ್ಲ. ಕನ್ನಡ ವಾಙ್ಮಯಕ್ಕೆ ಇದೊಂದು ಒಳ್ಳೆಯ ಸೇರ್ಪಡೆ. ಈ ಕೃತಿಗಾಗಿ ಕಲಾ ಭಾಗ್ವತ್ ಅವರಿಗೆ ಹಾರ್ದಿಕ ಅಭಿನಂದನೆಗಳು. ❍

## ಬೇಡ ಈ ಜಗತ್ತು !!

**– ಶಾರದಾ ಎ. ಅಂಚನ್ ಕೊಡವೂರು**

ಬೇಡವಾಗಿದೆ ಈ ಗ್ಲೋಬಲ್ ಜಗತ್ತು
ಇಲ್ಲಿ ದೇಹ ಸುಡುತಿದೆ ಅಲ್ಲಿಯ ಸಮರ ಕಂಡು
ಅದಕ್ಕೆಂದೇ ಹೊರಟಿರುವೆ ಗೌತಮ ಬುದ್ಧನಾಗಲು
ಸಕಲ ಸುಖ ಸಂಪತ್ತುಗಳ ಮರೆತು ॥
ದೇವ ನೀಡಿರುವ ಎಲ್ಲಾ ಸವಲತ್ತು
ಉಳಿಸಿಕೊಳ್ಳಲಾರದ ಈ ನತದೃಷ್ಟ ಬದುಕು
ಘನತೆ, ಸ್ವಪ್ರತಿಷ್ಠೆ ಯ ಜಂಬಕ್ಕೆ
ಇತರರ ಮಸಣಕ್ಕೆ ನೂಕುತ್ತಿರುವ ಕ್ಷುದ್ರ ಮನಸ್ಸು ॥
ಪ್ರತೀ ಜೀವಕ್ಕೂ ಬೆಲೆಯಿದೆ
ಅವರದೇ ಆದ ಕನಸುಗಳಿವೆ
ಎಲ್ಲೆಂದರಲ್ಲಿ ಬಂದೂಕು ಸಿಡಿದರೆ
ತಲೆಯೆತ್ತಿ ತಿರುಗುವ ಅವಕಾಶ ಎಲ್ಲಿದೆ ॥
ಹೆತ್ತ ಮಾತೆಯ ಗರ್ಭದಲಿ ಹುಟ್ಟಿ ಬಂದು
ದೇಶಕ್ಕೆಂದು ಬದುಕು ಮೀಸಲಾಗಿಟ್ಟಾಕ್ಷಣ
ಸೈನಿಕನ ರುಂಡ - ಮುಂಡ ಬೇರ್ಪಡಿಸಲು
ಯಾವ ರಾಷ್ಟ್ರನಾಯಕನಿಗಿದೆ ಹಕ್ಕು ॥
ಸುಟ್ಟು ಕರಕಲಾದ ಮಗನ ಬೂದಿಯಲಿ ಉರುಳುತ್ತಿರುವ
ಹೆತ್ತವಳ ಶೋಕ ಕಾಣಲಾರದೆ ಮುಚ್ಚಿಕೊಂಡಿದೆ ಕಣ್ಣು
ಅದಕ್ಕೆಂದೇ ಬೇಡವಾಗಿದೆ ಈ ಜಗತ್ತು
ಆಗುವೆನು ಗೌತಮ ಬುದ್ಧ
ಸಕಲ ಸಂಪತ್ತುಗಳ ಮರೆತು ॥

★★★

UIL

UGRU INDUSTRIES

*With Best Compliments from*

UGRU INDUSTRIES
**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

# ಸಂಕ್ಷಿಪ್ತ ಸುದ್ದಿಗಳು


## ಕನ್ನಡ ಕಲಾಕೇಂದ್ರ - ಚುಕ್ಕಿ ಸಂಕುಲನದಿಂದ ಕೃತಿ ಬಿಡುಗಡೆ - ಸಾಹಿತ್ಯ ಸಂಜೆ

'ಜಾಗತೀಕರಣದ ಹಿನ್ನೆಲೆಯಲ್ಲಿ, ಕನ್ನಡಿಗರು ಜಗತ್ತಿನ ವಿವಿಧ ಭಾಗಗಳಲ್ಲಿ, ತಮ್ಮ ವ್ಯವಸಾಯಕ್ಕೋ ಹರಡಿಕೊಂಡಿರುವ ಕನ್ನಡಿಗರನ್ನು, ಕನ್ನಡದ ಪುಸ್ತಕಗಳು ಬೆಸೆಯುತ್ತಿವೆ. ನಮ್ಮ ಮನಸ್ಸುಗಳು ಹತ್ತಿರವಾದಾಗ ಕನ್ನಡವು ಉಳಿಯುತ್ತದೆ, ಬೆಳೆಯುತ್ತದೆ. ನಾವು ಮನೆಯಲ್ಲಿ ಕನ್ನಡವನ್ನೇ ಮಾತನಾಡಬೇಕು. ನಾವು ನಮ್ಮ ಸಂಸ್ಕೃತಿಯನ್ನು ಅನುಸರಿಸಿದಾಗಲಷ್ಟೇ ಮಕ್ಕಳು ಅದರಿಂದ ಪ್ರಭಾವಿತರಾಗುತ್ತಾರೆ' ಎಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಇದರ ಪ್ರಧಾನ ಪ್ರಬಂಧಕ ಎಂ. ವೆಂಕಟೇಶ ತಿಳಿಸಿದರು.

ಕನ್ನಡ ಕಲಾಕೇಂದ್ರ ಮುಂಬಯಿ ಹಾಗೂ ಲೇಖಕ ಕಲಾವಿದರ ಬಳಗ ಮುಂಬಯಿ ಹಾಗೂ ಚುಕ್ಕಿ ಸಂಕುಲ ಸಂಯುಕ್ತ ಆಶ್ರಯದಲ್ಲಿ ಫೆ. 26ರಂದು ಸಂಜೆ ಮಾಟುಂಗಾ ಪೂರ್ವದ ಭಾವುದಾಜಿ ರಸ್ತೆಯಲ್ಲಿರುವ ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಆಯೋಜಿಸಿದ ಸಾಹಿತ್ಯ ಸಂಜೆ ಕಾರ್ಯಕ್ರಮ ಉದ್ಘಾಟಿಸಿ ಕವಿ, ಅಂಕಣಕಾರ ಗೋಪಾಲ ತ್ರಾಸಿ ರಚಿತ 'ಯುರೋಪ್ ಪ್ರವಾಸ ಕಥನ ಲಂಡನ್ ಟು ವ್ಯಾಟಿಕನ್ ಸಿಟಿ' (ಎಂಟು ದೇಶ ನೂರೆಂಟು ವಿಶೇಷ) ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಮುಂಬಯಿ ಕನ್ನಡಿಗರು ಹಗಲಿರುಳು ಕಷ್ಟಪಟ್ಟು ಮೇಲೆ ಬಂದವರು. ಗೋಪಾಲ ತ್ರಾಸಿಯವರು ಶ್ರಮಜೀವಿ, ಸಾಹಿತಿ. ತಮ್ಮ ವೃತ್ತಿಯೊಂದಿಗೆ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದವರು. ಈ ಪುಸ್ತಕವು ಪ್ರವಾಸಗಳಲ್ಲಿ ಆಸಕ್ತಿಯುಳ್ಳವರಿಗೆ ದಿಕ್ಸೂಚಿಯಾಗಬಲ್ಲದು ಎಂದು ಅವರು ನುಡಿದರು. ಕೃತಿಕಾರರಾದ ಗೋಪಾಲ ತ್ರಾಸಿಯವರು ಮಾತನಾಡುತ್ತ ಪ್ರವಾಸದುದ್ದಕ್ಕೂ ನಾನು ಕಂಡಿದ್ದು, ಬರೆದಿದ್ದು ಓದುಗರನ್ನು ತಲುಪಿದರೆ ಅವರಿಗೆ ಸಂತೋಷ ತಂದರೆ ತನ್ನ ಪ್ರಯತ್ನ ಸಾರ್ಥಕವಾಯಿತು ಎಂದುಕೊಳ್ಳುವೆ ಎಂದರು. ಹಾಗೆಯೇ ಇಲ್ಲಿ ನೆರೆದ ಸಾಹಿತ್ಯಾಸಕ್ತರು, ಸಾಹಿತಿಗಳು ನನ್ನ ಸಹೋದ್ಯೋಗಿ ಮಿತ್ರರು ನನ್ನ ಮೇಲಿಟ್ಟ ಸ್ನೇಹಾಭಿಮಾನಕ್ಕೆ ನಾನು ಋಣಿಯಾಗಿದ್ದೇನೆ, ಇಂದು ನನಗೆ ಖುಷಿಯಾಗಿದೆ ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಕೃತಿಗಾರರ ಜತೆಗೆ ನಡೆದ ಸಂವಾದದಲ್ಲಿ ಹಿರಿಯ ಕವಿ, ಕನ್ನಡಿಗ ಪತ್ರಕರ್ತರ ಸಂಘ ಮಹಾರಾಷ್ಟ್ರದ ಜತೆ ಕೋಶಾಧಿಕಾರಿ ಡಾ। ಜಿ.ಪಿ. ಕುಸುಮಾ, ಲೇಖಕ ಕವಿ ಅಶೋಕ ವಣದೂರು ಪಾಲ್ಗೊಂಡು ಅವರ ಕೃತಿಯ ಮುಖ್ಯ ಅಂಶದ ಮೇಲೆ ಬೆಳಕು ಚೆಲ್ಲಿದರು.

ಕವಿಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ ಹವ್ಯಕ ಸಂದೇಶದ ಸಂಪಾದಕಿ, ಕವಿ ಅಮಿತಾ ಭಾಗ್ವತ್ ಅವರು ಗೋಪಾಲ ತ್ರಾಸಿಯವರನ್ನು ಅಭಿನಂದಿಸಿ, ಅವರ ಸಾಹಿತ್ಯ ಸೇವೆ ಹೀಗೆಯೇ ನಿರಂತರವಾಗಿ ಸಾಗಲಿ ಎಂದು ಹಾರೈಸಿದರು. ನಮ್ಮ ಮಾನಸಿಕ ಪಾತಳಿ ವಿಸ್ತಾರವಾಗಬೇಕಾದರೆ




*PAGE DONATED BY : **SHRI A. K. BHAT, CHITRIGI & FAMILY***



ಓದು ಅವಶ್ಯಕ. ಓದು ನಮ್ಮ ಜೀವನ ದೃಷ್ಟಿಯನ್ನು ಹರಿತಗೊಳಿಸುತ್ತದೆ. ಪ್ರತಿ ಕವಿಯ ಕವಿತೆಗಳಿಗೂ ಅವನದೇ ಆದ ವೈಶಿಷ್ಟ್ಯವಿರುತ್ತದೆ, ಸೊಗಡಿರುತ್ತದೆ. ಅವೆಲ್ಲವೂ ಕೂಡಿ ಜೀವನದ ಸಾರವನ್ನು ನಮಗೆ ಉಣಿಸುತ್ತವೆ. ನಮ್ಮ ವಿಚಾರಗಳನ್ನು ವಿಶಾಲಗೊಳಿಸುವ ಸಾಹಿತ್ಯಕ್ಕೆ ಮನಸ್ಸುಗಳನ್ನು ಒಂದುಗೂಡಿಸುವ ಶಕ್ತಿ ಇದೆ ಎಂದು ನುಡಿದು, ಕನ್ನಡ ಕಲಾಕೇಂದ್ರ ಹಾಗೂ ಚುಕ್ಕಿ ಸಂಕುಲನದ ಕಾರ್ಯಕಲಾಪಗಳನ್ನು ಶ್ಲಾಘಿಸಿದರು.

ಕನ್ನಡ ಕಲಾಕೇಂದ್ರ ಮುಂಬಯಿಯ ಅಧ್ಯಕ್ಷರಾದ ಹಾಗೂ ಕಾರ್ಯಕ್ರಮದ ಸರ್ವಾಧ್ಯಕ್ಷರಾದ ಮಧುಸೂಧನ ಟಿ. ಆರ್. ರವರು ಹಿಂದಿನವರು ಶ್ರಮವಹಿಸಿ ಕಟ್ಟಿ ಬೆಳೆಸಿದ ಸಂಸ್ಥೆಗಳನ್ನು ಮುನ್ನಡೆಸಿ ಕೊಂಡು ಹೋಗುವ ಜವಾಬ್ದಾರಿ ಇಂದು ನಮ್ಮ ಮೇಲಿದೆ. ನಾವು ಕನ್ನಡಿಗರು ನಮ್ಮ ದುಡಿಮೆಯ ನಡುವೆಯೂ ನಮ್ಮ ನೆಲೆ, ನುಡಿ, ಸಂಸ್ಕೃತಿಗಳಲ್ಲಿ ನಮ್ಮತನವನ್ನು ತೋರ್ಪಡಿಸಿಕೊಳ್ಳುತ್ತಿದ್ದೇವೆ. ಮನುಷ್ಯನ ಅಭಿವ್ಯಕ್ತಿಯ ಮಾಧ್ಯಮವಾದ ಕಲೆಯನ್ನು ಬೆಳೆಸುವುದು ಸಮಾನ ಮನಸ್ಕರ ಮತ್ತು ಸಂಪನ್ಮೂಲ ವ್ಯಕ್ತಿಗಳ ಸಾಂಗತ್ಯದಿಂದ ಮಾತ್ರ ಸಾಧ್ಯ ಎಂದರು.



ಕವಿಗೋಷ್ಠಿಯಲ್ಲಿ ನಾರಾಯಣ ಶೆಟ್ಟಿ ನಂದಳಿಕೆ, ಡಾ। ಜಿ. ಪಿ. ಕುಸುಮ, ಅಶೋಕ ವಳದೂರು, ಡಾ। ವೈಶಾಲಿ ನಾಯಕ್, ಸರೋಜಾ ಶ್ರೀಕಾಂತ್ ಅಮಾತಿ, ಅರುಷಾ ಎನ್. ಶೆಟ್ಟಿ, ಹೇಮಾ ಸದಾನಂದ ಅಮೀನ್, ವಿಠ್ಠಲ ಮಸಿಕಿ, ಸವಿತಾ ಶೆಟ್ಟಿ, ಗಣೇಶ ಕುಮಾರ್, ಸಾ.ದಯಾ, ಗೋಪಾಲ ತ್ರಾಸಿ, ಅಮಿತಾ ಭಾಗ್ವತ್ ಭಾಗವಹಿಸಿ ಸ್ವರಚಿತ ಕವನವನ್ನು ವಾಚಿಸಿದರು. ಕೃತಿಯ ಮುಖಪುಟದ ರಚನೆಕಾರರಾದ ಗಣೇಶ್ ಕುಮಾರ್ ಅವರನ್ನು ಗೌರವಿಸಲಾಯಿತು.

ಸಾನ್ವಿ ರೈ ತ್ರಾಸಿ ಪ್ರಾರ್ಥನೆಗೈದರು. ಮನೋಹರ್ ಶೆಟ್ಟಿ ನಂದಳಿಕೆ ಸ್ವಾಗತಿಸಿ ಅತಿಥಿಗಳನ್ನು ಪರಿಚಯಿಸಿದರು. ಡಿ.ರೈ ವಂದಿಸಿದರು. ಸಾ.ದಯಾ ಕಾರ್ಯಕ್ರಮವನ್ನು ನಿರೂಪಿಸಿದರು.

## ಕರ್ನಾಟಕ ಸಂಘ ಮಹಿಳಾ ವಿಭಾಗದ ವತಿಯಿಂದ ಮಹಿಳಾ ದಿನಾಚರಣೆ




ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುವ ಈ ಸಂದರ್ಭದಲ್ಲಿ ಮಹಿಳೆಯರು ಇಂದು ಪುರುಷರಿಗೆ ಸರಿಸಮಾನರಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಹೇಳಲು ಸಂತೋಷವೆನಿಸುತ್ತದೆ. ಮಹಿಳೆಯರಿಗೆ ಒಂದು ಬಾರಿಗೆ ವಿವಿಧ ಕಾರ್ಯಗಳನ್ನು ಮಾಡುವ ಚಾತುರ್ಯವಿದೆ. ಮಹಿಳೆಯರು ತಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ, ಮೌಲ್ಯಯುತವಾದ ಸಂಬಂಧಗಳನ್ನು ಉಳಿಸಿ, ಬೆಳೆಸಿ, ಪ್ರೀತಿ ವಿಶ್ವಾಸ, ವಾತ್ಸಲ್ಯದೊಂದಿಗೆ ಮಕ್ಕಳನ್ನು ಸುಸಂಸ್ಕೃತ ನಾಗರಿಕರನ್ನಾಗಿ ಬೆಳೆಸಬೇಕು ಎಂದು ಕವಿ, ಸಾಹಿತಿ ಡಾ. ಜಿ.ಪಿ. ಕುಸುಮಾರವರು ನುಡಿದರು. ಅವರು ಮಾರ್ಚ್ 20ರಂದು ಭಾನುವಾರ ಕರ್ನಾಟಕ ಸಂಘ ಡೊಂಬಿವಲಿಯ ಮಹಿಳಾ ವಿಭಾಗದಿಂದ ಆಚರಿಸಲ್ಪಟ್ಟ ಮಹಿಳಾ ದಿನಾಚರಣೆಯ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು. ಮಹಿಳಾ ವಿಭಾಗವು ಆಯೋಜಿಸಿದ ಕಿರುನಾಟಕ ಸ್ಪರ್ಧೆಯನ್ನು ಶ್ಲಾಘಿಸುತ್ತಾ ಕಲಾವಿದರಿಗೆ ಯಾವುದೇ ವಯೋಮಾನದ ಗಡಿ ಇರುವುದಿಲ್ಲ ಎಂದು ನಾಟಕಗಳಲ್ಲಿ ಭಾಗವಹಿಸಿದ ಕಲಾವಿದರ ಕೌಶಲ್ಯವನ್ನು ಶ್ಲಾಘಿಸಿದರು.

ನಾಟಕ ಸ್ಪರ್ಧೆಯಲ್ಲಿ ಸುಮಾರು 10 ನಾಟಕಗಳನ್ನು ಪ್ರದರ್ಶಿಸಲಾಗಿದ್ದು, ಅದರಲ್ಲಿ ಹವ್ಯಕ ಮಹಿಳೆಯರಾದ ಸುಮಿತ್ರಾ ಭಟ್, ವೇದಾವತಿ ಭಟ್, ಗೀತಾ ಹೆಗಡೆ, ಹೇಮಾವತಿ ಹೆಗಡೆ, ಲಲಿತಾ ಮಾರ್ಕಾಂಡೆಯವರು ಭಾಗವಹಿಸಿದ್ದರು. ಮಹಿಳಾ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ 'ಕಸದಿಂದ ರಸ' ಸ್ಪರ್ಧೆಯಲ್ಲಿ ಶ್ರೀಮತಿ ಹೇಮಾವತಿ ಹೆಗಡೆ ಪ್ರಥಮ ಬಹುಮಾನ ಪಡೆದರು.

ಅದೇ ಸಂದರ್ಭದಲ್ಲಿ ಲೇಖಕಿ ಗುರುಕುಲ ಪ್ರತಿಷ್ಠಾನದ ಅಂತಾರಾಜ್ಯ ಘಟಕದ ಅಧ್ಯಕ್ಷೆ ವೇದಾವತಿ ಭಟ್‌ರವರನ್ನು ಹಾಗೂ ಮಂಜುನಾಥ ಮಹಾವಿದ್ಯಾಲಯದ ಪ್ರೊ. ಪ್ರಿಯಾ ವಿ. ಪಂಡಾರಪಟ್ಟೆಯವರನ್ನು ಶಾಲು, ಫಲ, ಪುಷ್ಪ, ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು.

ನಾಟಕದ ತೀರ್ಪುಗಾರರಾಗಿ ನಾರಾಯಣ ಶೆಟ್ಟಿ ಹಾಗೂ ದಯಾನಂದ ಸಾಲ್ಯಾನ್ ಸಹಕರಿಸಿದರು.

ಮಹಿಳಾ ವಿಭಾಗದ ಕಾರ್ಯಾಧ್ಯಕ್ಷರಾದ ಸುಷ್ಮಾ ದಿವಾಕರ ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಕಲಾಪಗಳನ್ನು ವಿವರಿಸಿದರು. ಸಂಘದ ಅಧ್ಯಕ್ಷರಾದ ದಿವಾಕರ ಶೆಟ್ಟಿಯವರು ಮಹಿಳಾ ವಿಭಾಗವು ಮಹಿಳೆಯರು ಎಲ್ಲಾ ರಂಗಗಳಲ್ಲಿಯೂ ತಮ್ಮನ್ನು ತಾವು ಗುರುತಿಸಿಕೊಳ್ಳಬೇಕು ಎನ್ನುವ ನಿಟ್ಟಿನಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವುದನ್ನು ಶ್ಲಾಘಿಸಿದರು.

ಪದ್ಮಾ ಮುಲ್ಕಿ ವಂದಿಸಿದರು. ಕರ್ನಾಟಕ ಸಂಘದ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

*PAGE DONATED BY : **SMT. SHANTA V. HEGDE, CARMICHAEL ROAD***

***RNI NO. MAHBIL / 2000 / 746,***
***Postal R.NO. MCN/161/2021-2023***
***WPP License No. MR / Tech / WPP-130 / North / 2021-2023***
***'Licence to post without prepayment'***

***Posted at Mumbai Patrika Channel Stg. Office Mumbai - 400 001***
**Date of Publication : 1st of every month**

**REGISTERED NEWSPAPER**

**Date of Posting :**
**2nd, 3rd of every month**

***If undelivered, please return to :***
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**To,**



## Achievement

**Vivek N. Pandit,** S/o. Nagraj V. Pandit has completed his MS from Carnegie Mellon University USA in 'Computational Data Science' in May 2020.

Earlier Vivek had passed out from IIT Bombay with BTech/MTech(Duel Degree) securing CPI 9.1 And is currently working with Microsoft in California."

***We congratulate him and wish him a bright future.***

★ ★ ★

